ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/-
ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ-06 • ಸಂಚಿಕೆ-11 • ಮಾರ್ಚ್ 2025



ರೂ. 28/- BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-06 • ಸಂಚಿಕೆ-11 • ಮಾರ್ಚ್ 2025

05 ಗಾಂಧೀಜಿಯವರ ಚೈತನ್ಯ:
ಕಸ್ತೂರ್‌ಬಾ

09 ಕರ್ನಾಟಕದ ಹೆಮ್ಮೆ : ಕಡಿದಾಳ್ ಮಂಜಪ್ಪ
- ಪ್ರೊ. ಜಿ. ಬಿ. ಶಿವರಾಜ್

13 ಗಾಂಧಿ ಮಾದರಿಯ ರಾಜಕಾರಣಿ : ಕಡಿದಾಳ್ ಮಂಜಪ್ಪ
- ಪ್ರೊ. ಹೆಚ್. ಎಸ್. ಈಶ್ವರ್

14 ಅರಸೀಕೆರೆಯ ಕಸ್ತೂರ್‌ಬಾ ಆಶ್ರಮ

16 ಸಮಾಜ ಸೇವೆಯಲ್ಲಿ ಸಮರ್ಪಣಾ ಸಂಸ್ಥೆ

20 ಗಾಂಧಿ ಏಕೆ ರಾಷ್ಟ್ರಪಿತ ?
-ಅರವಿಂದ ಚೊಕ್ಕಾಡಿ

23 Gandhijigiri of Ramesh Bhai
-Gopal Hosur, IPS

24 ಗಾಂಧಿ ಸಿನಿಮಾ ಕ್ಲಬ್

26 ಕಸ್ತೂರ್ ಬಾ ಜೊತೆ ನನ್ನ ಹೆಜ್ಜೆ
- ಬಿ. ಎನ್. ಶಶಿಕಲಾ

28 ದಾಂಡಿ ನಡಿಗೆ ಉಪ್ಪಿನ ಸತ್ಯಾಗ್ರಹ

29 ಚಿತ್ರಾವಳಿ

32 ಎಲ್ಲರ ಗಾಂಧೀಜಿ: ಎರಡು ಮುಖಗಳು
-ನಟರಾಜ್ ಹುಳಿಯಾರ್

ಕರ್ನಾಟಕ ಗಾಂಧಿ
ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English
Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು
ಬಾಪು ಪ್ರಪಂಚದಲ್ಲಿನ ಚಿತ್ರಗಳು ಸಾಂದರ್ಭಿಕವಾಗಿರುತ್ತದೆ

Design : **Ujwal Creations,** Bangalore

ಪತ್ರಗಳು

ಮಾನ್ಯರೆ,

ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆ ತನ್ನಿ. ಚಿಕ್ಕದಾದರೂ ಚಿಂತೆಯಿಲ್ಲ. ಈ ಸಂಸ್ಥೆ ಕಟ್ಟಿ ಬೆಳೆಸಿದ ಮಹನೀಯರ ಮಾಲಿಕೆಯನ್ನು ಬಾಪೂ ಪ್ರಪಂಚದಲ್ಲಿ ಪ್ರಕಟಿಸಿ .

ಮಹಾಂತೇಶ್, ಬೆಂಗಳೂರು

* * *

ಮಾನ್ಯರೆ ,

ಗಾಂಧಿ ಭವನ ಹೊಸ ತಲೆಮಾರಿನವರನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸಬೇಕು . ಇದು ನಿಮ್ಮ ಗಮನದಲ್ಲಿರಲಿ. ಹಳೆಯ ತಲೆಮಾರಿನವರು ನಮಗೆ ಗಾಂಧಿಪ್ರಚಾರದ ತೋರುಗಂಬವಾಗಿರಲಿ . ಯುವಸಮುದಾಯವೇ ನಿಮ್ಮ ಗುರಿಯಾಗಿರಲಿ .ಭಿನ್ನ ನೆಲೆಯಲ್ಲಿ ಗಾಂಧಿ ಚಿಂತನೆಗಳಲ್ಲಿ ಪ್ರಯೋಗ ಮಾಡುತ್ತಿರುವ ಸಾಧಕರನ್ನು ಗಾಂಧಿ ಭವನ ಆಕರ್ಷಿಸ ಬೇಕು .


– ಡಾ. ಸುಜಯ್ ಕುಮಾರ್, ಶ್ರೀರಂಗಪಟ್ಟಣ

* * *

ಮಾನ್ಯರೆ,

ಗಾಂಧಿ ಪ್ರಣೀತ ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಕಾರ್ಯಕರ್ತರನ್ನು ತೊಡಗಿಸಿಕೊಳ್ಳಬೇಕು. ಇನ್ನು ಮುಂದೆ ಈ ಸಂಸ್ಥೆಗಳನ್ನು ಅವರೇ ಮುನ್ನಡೆಸುವಂತಹ ವಾತಾವರಣವನ್ನು ನಿರ್ಮಿಸಿ . ಪ್ರಚಲಿತ ವಿದ್ಯಮಾನಗಳಿಗೆ ಗಾಂಧಿ ಚಿಂತನೆಗಳ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ಮಾಡುವ ವೇದಿಕೆಗಳನ್ನು ರೂಪಿಸಲು ಗಾಂಧಿ ಸ್ಮಾರಕ ನಿಧಿ ವೇಗ ವರ್ಧಕವಾಗಿ ಕಾರ್ಯನಿರತರಾಗುವ ಅವಶ್ಯಕತೆಯಿದೆ .

– ಯುವ ರಂಗಕರ್ಮಿಗಳು, ಬೆಂಗಳೂರು



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು
https://gandhibhavan.in
ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಯ ಬಗ್ಗೆ
ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com



ಗಾಂಧೀಜಿಯವರ ಚೈತನ್ಯ

ಕಸ್ತೂರ ಬಾ

ಕಸ್ತೂರ ಬಾ 1944ರ ಫೆಬ್ರವರಿ 22 ರ ಮಹಾಶಿವರಾತ್ರಿಯಂದು ಈ ಲೋಕವನ್ನಗಲಿದರು.

ಗಾಂಧೀಜಿಯವರು ಬಾ ಅವರನ್ನು ಕುರಿತು ಆಡಿರುವ ಮಾತುಗಳು ಆಕೆಯ ವ್ಯಕ್ತಿತ್ವದ ಪ್ರೋಜ್ವಲತೆಗೆ ಸಾಕ್ಷಿಯಾಗಿವೆ : "ಕಸ್ತೂರ ಬಾ ಉದ್ದಕ್ಕೂ ನನ್ನ ಪೋಷಕಳಾಗಿದ್ದಳು. ಆಕೆಯಿಲ್ಲದಿದ್ದರೆ ನಾನು ಅನಾಥನಾಗುತ್ತಿದ್ದೆ. ಜಗತ್ತಿನಲ್ಲಿ ಮತ್ತಾವ ಹೆಣ್ಣೂ ನನ್ನನ್ನು ಹಾಗೆ ಮಿಡಿಯಲಾರಳು. ಆಕೆಯ ಸಹನೆ ಅದ್ವಿತೀಯ. ಆ ಸಹನೆಯೇ ನನಗೆ ಅಹಿಂಸೆಯ ಪಾಠವನ್ನು ಕಲಿಸಿತು. ಅದೇ ನನ್ನ ತಾರಕ ಮಂತ್ರವಾಯಿತು. ತನ್ನ ಸಹನೆಯ ಬೆಲೆ ಆಕೆಗೇ ಗೊತ್ತಿರಲಿಲ್ಲ. ನಾನು ಅದರ ಅಮಿತವಾದ ಬೆಲೆಯನ್ನರಿತು ಅನುಸರಣೆಗೆ ತಂದೆ. ಆದ್ದರಿಂದ ಈ ವಿಚಾರದಲ್ಲಿ ಆಕೆ ನನಗೆ ಎಂದೆಂದಿಗೂ ಗುರುಸಮಾನಳು".

ಕಸ್ತೂರ ಬಾ ಅವರು 1869 ವರ್ಷದ ಏಪ್ರಿಲ್ 11 ರಂದು ಪೋರ್ ಬಂದರಿನಲ್ಲಿ ಜನಿಸಿದರು. ತಮ್ಮ ಪತಿ ಮಹಾತ್ಮ ಗಾಂಧಿ ಅವರಿಗಿಂತ ಅವರು 5 ತಿಂಗಳು ಹಿರಿಯರು.

ಕಸ್ತೂರ ಬಾ ಅವರ ತಂದೆ ಗೋಕುಲದಾಸ ಮಾಕಂಜಿ ಮತ್ತು ತಾಯಿ ವೆರಾಜ್‌ಕುಂವರ ಬಾ. ಈ ದಂಪತಿಗಳಿಗೆ ಕಸ್ತೂರ ಬಾ ಹಿರಿಯ ಮಗಳು. ಮಾಕಂಜಿಯವರಿಗೂ ಗಾಂಧೀಜಿಯ ತಂದೆ ಕರಮಚಂದ್ ಗಾಂಧೀಯವರಿಗೂ ತುಂಬ ಸ್ನೇಹ. ಹೀಗೆ ಕಸ್ತೂರ ಬಾ ಮತ್ತು ಗಾಂಧೀಜಿಯವರ ವಿವಾಹ ನೆರವೇರಿತು. ಆಗ ಅವರಿಬ್ಬರಿಗೂ ಹನ್ನೆರಡು ವರ್ಷ ವಯಸ್ಸು.

ಸಂಪ್ರದಾಯವಂತ ಧನಿಕ ಮನೆತನದಲ್ಲಿ ಬೆಳೆದ ಕಸ್ತೂರ ಬಾ ಅವರಿಗೆ ಓದುಬರಹ ಬರುತ್ತಿರಲಿಲ್ಲ. ಗಾಂಧೀಜಿ ಆಕೆಯನ್ನು ವಿದ್ಯಾವಂತಳನ್ನಾಗಿ ಮಾಡಲು ತುಂಬ ಪ್ರಯತ್ನಪಟ್ಟರು. ಆದರೆ ಅದು ಫಲಿಸಲಿಲ್ಲ. ಕಸ್ತೂರ ಬಾ

ಅವರಿಗೆ ಆಗ ಕಲಿಯುವ ಅಗತ್ಯ ಕಾಣಿಸಲಿಲ್ಲ. ಆದರೆ ಮುಂದೆ ಅದಕ್ಕಾಗಿ ಅವರು ಪಶ್ಚಾತ್ತಾಪ ಪಟ್ಟಿದ್ದುಂಟು . ಅಲ್ಪಸ್ವಲ್ಪ ಗುಜರಾಥಿಯನ್ನು ಮಾತ್ರ ಅವರು ಅಭ್ಯಾಸ ಮಾಡಿದ್ದರು.

ಗಾಂಧೀಜಿಗೆ ತಮ್ಮ ಹೆಂಡತಿ ಆದರ್ಶ ಸತಿಯಾಗಬೇಕೆಂಬ ಹೆಬ್ಬಯಕೆಯಿತ್ತು. ಇದಕ್ಕಾಗಿ ಅವರು ಕಸ್ತೂರ ಬಾ ಚಲನವಲನಗಳ ಮೇಲೆ ನಿರ್ಬಂಧ ಹೇರಿದರು. ಆಕೆ ತಮಗೆ ಸದಾ ವಿಧೇಯಳಾಗಿರಬೇಕೆಂದು ಆಶಿಸಿದರು . ಕಸ್ತೂರ ಬಾ ಎಂದೂ ಪತಿಗೆ ಅವಿಧೇಯರಾಗಿ ನಡೆಯದಿದ್ದರೂ ಪತಿಯ ಈ ಕಟ್ಟುಕಟ್ಟಳೆಗಳು ಅವರಿಗೆ ಸಹನವಾಗುತ್ತಿರಲಿಲ್ಲ. ಕೆಲವು ವೇಳೆ ಗಾಂಧೀಜಿಯ ಅಪ್ಪಣೆಯಿಲ್ಲದೆ ದೇವಸ್ಥಾನಕ್ಕೋ ಗೆಳತಿಯರ ಮನೆಗೋ ಹೋಗುತ್ತಿದ್ದರು. ಇದು ಗಾಂಧೀಜಿಗೆ ಅಪರಾಧವಾಗಿ ತೋರಿ ಅದು ಮುನಿಸಿನಲ್ಲಿ ಪರ್ಯವಸಾನವಾಗುತ್ತಿತ್ತು. ಕೋಪದಲ್ಲಿ ಒಮ್ಮೆ ಹೆಂಡತಿಯನ್ನು ತೌರುಮನೆಗೆ ಕಳುಹಿಸಿಬಿಟ್ಟಿದ್ದೂ ಉಂಟು. ಕಸ್ತೂರ ಬಾ ತುಟಿ ಎರಡು ಮಾಡದೆ ಇದೆಲ್ಲವನ್ನು ಸಹಿಸಿದರು. ತಮ್ಮ ಈ ವರ್ತನೆಗಾಗಿ ಗಾಂಧೀಜಿ ಮುಂದೆ ಜಿಗುಪ್ಸೆ ಪಟ್ಟುಕೊಂಡರು.

ಇಂಗ್ಲೆಂಡಿನಲ್ಲಿ ಬಾರ್-ಆಟ್-ಲಾ ವ್ಯಾಸಂಗವನ್ನು ಮುಗಿಸಿ





ಮರಳಿದ ಗಾಂಧೀಜಿ ವಕೀಲಿ ವೃತ್ತಿ ಕೈಗೊಂಡರು. ಆದರೆ ಅದರಲ್ಲಿ ಯಶಸ್ಸು ಸಿಗಲಿಲ್ಲ. ಅಷ್ಟರಲ್ಲಿ ದಕ್ಷಿಣ ಆಫ್ರಿಕದಿಂದ ಅವರಿಗೆ ಕರೆ ಬಂತು. ಮೊಕದ್ದಮೆಯೊಂದನ್ನು ನಡೆಸಿಕೊಡಲು ಹೋದ ಗಾಂಧೀಜಿ ಮೂರು ವರ್ಷ ಅಲ್ಲಿಯೇ ನಿಂತರು. ವಿದೇಶೀಯರ ದಬ್ಬಾಳಿಕೆಯಿಂದ ನರಳುತ್ತಿದ್ದ ಭಾರತೀಯರ ಉದ್ಧಾರಕ್ಕೆ ಕಂಕಣತೊಟ್ಟರು. ಮೂರು ವರ್ಷಗಳ ಅನಂತರ ಭಾರತಕ್ಕೆ ಮರಳಿ, ಕಸ್ತೂರ ಬಾ ಮತ್ತು ಎರಡು ಮಕ್ಕಳೊಂದಿಗೆ ಮತ್ತೆ ಆಫ್ರಿಕಕ್ಕೆ ಹೊರಟರು.

ವಿದೇಶದಲ್ಲಿ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಸಂಸಾರ ಆರಂಭವಾಯಿತು. ಉನ್ನತಾದರ್ಶ ಧ್ಯೇಯ ಸಾಧನೆಗಾಗಿ ಅನವರತ ಶ್ರಮಿಸುತ್ತಿದ್ದ ಗಾಂಧೀಜಿಯವರೊಡನೆ ಬಾಳು ನಡೆಸುವಾಗ ಕಸ್ತೂರ ಬಾ ಅನೇಕ ಅಗ್ನಿಪರೀಕ್ಷೆಗಳನ್ನೆದುರಿಸಬೇಕಾಯಿತು. ಒಮ್ಮೆ ಅವರ ಮನೆಗೆ ಬಂದಿದ್ದ ಹರಿಜನರೊಬ್ಬರ ಕಲ್ಮಶಪಾತ್ರೆಯನ್ನು ತೊಳೆಯಲು ಬಾ ನಿರಾಕರಿಸಿದರು. ಕೋಪಗೊಂಡ ಗಾಂಧೀಜಿ ಅವರನ್ನು ಮನೆಯಿಂದಾಚೆ ತಳ್ಳಲು ಹೊರಟರು. ಬಾ ಅಳುತ್ತಾ, ಅಯ್ಯೋ ಇದೇನು ನಿಮಗೆ ಸ್ವಲ್ಪವೂ ನಾಚಿಕೆಯಿಲ್ಲವೇ, ಈ ವಿದೇಶದಲ್ಲಿ ನಾನೆಲ್ಲಿಗೆ ಹೋಗಲಿ ? ಇಲ್ಲಿ ನನಗೆ ಯಾರಿದ್ದಾರೆ ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಾನು ಈ ಎಲ್ಲ ಅವಮಾನಗಳನ್ನೂ ಸಹಿಸಿಕೊಂಡಿರಬೇಕೆ ? ನಿಮ್ಮ ದಮ್ಮಯ್ಯ, ದಯವಿಟ್ಟು ಬಾಗಿಲು ಮುಚ್ಚಿ. ನೋಡಿದವರೇನಂದಾರು ? ಎಂದು ದೈನ್ಯವಾಣಿಯಿಂದ ನಿವೇದಿಸಿಕೊಂಡರು. ಈ ಮಾತುಗಳನ್ನು ಕೇಳಿ ಗಾಂಧೀಜಿಗೆ ನಾಚಿಕೆಯಾಯಿತು. ತಮ್ಮ ಹೆಂಡತಿ ತಮ್ಮನ್ನು ಬಿಟ್ಟಿರಲು ಅಸಾಧ್ಯವಾದರೆ ಆಕೆಯನ್ನು ಬಿಟ್ಟಿರುವುದಕ್ಕೆ ತಮಗೂ ಸಾಧ್ಯವಿಲ್ಲ ಎಂದು ಬಗೆದರು.

ಮತ್ತೊಮ್ಮೆ ಇಂಥದ್ದೇ ಪ್ರಸಂಗವೊಂದು ನಡೆಯಿತು. ಗಾಂಧೀಜಿ ವಿದೇಶದಿಂದ ಭಾರತಕ್ಕೆ ಮರಳುವಾಗ ಅಲ್ಲಿಯ ಭಾರತೀಯರೆಲ್ಲ ಅವರಿಗೆ ಅನೇಕ ಕಾಣಿಕೆಗಳನ್ನು ಕೊಟ್ಟರು. ಗಾಂಧೀಜಿಗೆ ಅವುಗಳನ್ನು ತೆಗೆದುಕೊಂಡು ಹೋಗಲಿಷ್ಟವಿರಲಿಲ್ಲ. ಆದರೆ ಇದಕ್ಕೆ ಬಾ ಅವರನ್ನೊಪ್ಪಿಸುವುದು ತುಂಬಾ ಕಷ್ಟವಾಯಿತು. ಬಾ ಎಷ್ಟೆಷ್ಟೋ ವಾದಿಸಿದರೂ ಗಾಂಧೀಜಿಯ ನಿರ್ಧಾರ ಬದಲಾಗಲಿಲ್ಲ. ಕೊನೆಗೆ ಆ ಒಡವೆ ವಸ್ತುಗಳನ್ನೆಲ್ಲ ಅಲ್ಲಿಯೇ ಬಿಟ್ಟುಬರಲೊಪ್ಪಿದರು. ಹೀಗೆ ಅವರ ಆರಂಭದ ಸಂಸಾರ ಜೀವನದಲ್ಲಿ ಹಲವು ವಿರಸಗಳು ಬರುತ್ತಿದ್ದರೂ ಅವು ಶಾಂತಿಯಲ್ಲಿ ಮುಕ್ತಾಯವಾಗುತ್ತಿದ್ದವು. ಕಸ್ತೂರ ಬಾರವರ ಸಹನೆಯೇ ಕೊನೆಗೆ ಗೆಲ್ಲುತ್ತಿತ್ತು.

ಕಸ್ತೂರ ಬಾ ಎಂತಹ ಸಂಕಷ್ಟ ಬಂದರೂ ಸಂಪ್ರದಾಯ ನಿಷ್ಠೆಯನ್ನು ಬಿಟ್ಟವರಲ್ಲ. ಆಚಾರ ವ್ಯವಹಾರಗಳನ್ನು ಮೀರಿ ನಡೆದವರಲ್ಲ. ಮೊದಲಿನಿಂದಲೂ ಅವರು ಬೆಳೆದ ವಾತಾವರಣ ಅಂಥದಾಗಿತ್ತು. ಒಮ್ಮೆ ಆಫ್ರಿಕದಲ್ಲಿದ್ದಾಗ ಅವರು ತೀವ್ರ ಕಾಯಿಲೆಗೊಳಗಾದರು. ಅದು ವಾಸಿಯಾದ ಮೇಲೆ ಶಕ್ತಿಗೊಡಲು ಮಾಂಸದ ಕಷಾಯವನ್ನು ಕುಡಿಯುವಂತೆ ವೈದ್ಯರು ಸೂಚಿಸಿದರು. ಆದರೆ ಆಕೆ ತಮ್ಮ ಪ್ರಾಣ ಹೋದರೂ ಮಾಂಸದ ಕಷಾಯವನ್ನು ಮುಟ್ಟುವುದಿಲ್ಲವೆಂದರು. ಗಾಂಧೀಜಿಯವರಿಗೂ ಅವರ ನಿರ್ಧಾರ ಸಂತೋಷವನ್ನೇ ತಂದಿತು.

ಬಾ ಮತ್ತು ಬಾಪೂರವರ ಬಾಳಿನಲ್ಲಿ 1906 ಮಹತ್ವದ ವರ್ಷ. ಆಗ ಗಾಂಧೀಜಿ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದರು. ಕಸ್ತೂರ ಬಾ ಸಂತೋಷದಿಂದ ಅದಕ್ಕೆ ಸಮ್ಮತಿಯಿತ್ತರು. ಅವರ ಚಿತ್ತಸ್ಥೈರ್ಯ ಮತ್ತು ಅಪೂರ್ವ ಸಂಯಮಗಳನ್ನು ಕಂಡು ಗಾಂಧೀಜಿಯವರೇ ಬೆರಗಾದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ಆರಂಭಿಸಿದ ಸತ್ಯಾಗ್ರಹ ಚಳವಳಿಯಲ್ಲಿ ಕಸ್ತೂರ ಬಾ ಸ್ವಸಂತೋಷದಿಂದ ಭಾಗವಹಿಸಿದರು; ಆರು ವರ್ಷಗಳ ಕಾಲ ನಡೆದ ಧೀರ್ಘ ಚಳವಳಿಯಲ್ಲಿ ಅನೇಕ ಬಾರಿ ಸೆರೆಗೆ ಹೋದರು. ಅವರ ಶ್ರದ್ಧೆ ಸಾಹಸಗಳನ್ನು ಕಂಡು ಎಲ್ಲರಿಗೂ ಬೆರಗಾಯಿತು. ಕಟ್ಟಕಡೆಗೆ ಜಯಗಳಿಸಿದ ಗಾಂಧೀಜಿಯವರನ್ನು ಕಂಡು ಬಾ ಕೃತಾರ್ಥರಾದರು. ಕೇವಲ ತಮ್ಮ ಸಂಸಾರದ ಜೀವನೋಪಾಯವನ್ನು ಗಳಿಸುವುದಕ್ಕೆ ದೇಶ ಬಿಟ್ಟು ಹೊರಟ ದಂಪತಿಗಳು ನೂರಾರು ಸಂಸಾರಗಳಿಗೆ ಜೀವನೋಪಾಯವನ್ನು ತೋರಿಸಿಕೊಟ್ಟು ಸ್ವದೇಶಕ್ಕೆ ಹಿಂದಿರುಗಿದರು.

ಗಾಂಧೀಜಿ ಸಬರಮತಿಯಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ಕಸ್ತೂರ ಬಾ ಅವರೇ ಮೊಟ್ಟಮೊದಲ ಶಿಷ್ಯೆ. ಇಡೀ ಆಶ್ರಮವೇ ಆಕೆಯ ಸಂಸಾರವಾಯಿತು. ಆಶ್ರಮದ ಎಲ್ಲ ಜವಾಬ್ದಾರಿಗಳನ್ನೂ ದಕ್ಷತೆಯಿಂದ ನಿರ್ವಹಿಸುತ್ತ ಅಲ್ಲಿಯ ಪ್ರತಿಯೊಬ್ಬ ನಿವಾಸಿಗೂ ಅವರು ತಾಯಿಯಂತಿದ್ದರು. ಅಲ್ಲಿಯೂ ಆಕೆ ಗಾಂಧೀಜಿಯ ಕಠಿಣ ಪರೀಕ್ಷೆಗಳಿಗೊಳಬೇಕಾಯಿತು. ಆಶ್ರಮದಲ್ಲಿ ಅಸ್ಪೃಷ್ಯ ಸಂಸಾರವೊಂದು ನೆಲೆಸಿದಾಗ ಆಶ್ರಮದ ಇತರರಂತೆ ಬಾ ಅವರಿಗೂ ಅಸಮಾಧಾನವಾಯಿತು. ಇದರಿಂದ ನೊಂದ ಗಾಂಧೀಜಿಯವರು ಉಪವಾಸ ಕೈಗೊಂಡರು. ಕೊನೆಗೆ ಬಾ ಸಂಪೂರ್ಣವಾಗಿ ಬದಲಾದರು. ಅಂದಿನಿಂದ ಅಸ್ಪೃಷ್ಯತೆ ಎಂಬುದು ಅವರ ಮನಸ್ಸಿನಲ್ಲಿ ಇಣುಕಲಿಲ್ಲ. ಗಾಂಧೀಜಿ ಹರಿಜನರ ಮೇಲ್ಮೆಗಾಗಿ ಕೈಗೊಂಡ ಪ್ರತಿಯೊಂದು ಕಾರ್ಯದಲ್ಲೂ ನೇರವಾಗಿ ನಿಂತು ಹೃತ್ಪೂರ್ವಕವಾಗಿ ಸೇವೆ ಸಲ್ಲಿಸಿದರು. ಇಷ್ಟೇ ಅಲ್ಲ, ಲಕ್ಷ್ಮಿ ಎಂಬ ಅನಾಥ ಹರಿಜನ ಕನ್ಯೆಯೊಬ್ಬಳನ್ನು ಅವರು ಸಾಕಿ ಸಲಹಿದರು.

1936ರಲ್ಲಿ ಅಮೃತಸರದಲ್ಲಿ ಏರ್ಪಡಿಸಿದ್ದ ಹರಿಜನರ ಮಹಾಸಭೆಗೆ ಬಾ ಅವರೇ ಅಧ್ಯಕ್ಷಿಣಿ. ಅಂದು ಅವರು ಮಾಡಿದ ಸರಳ ಭಾಷಣದಲ್ಲಿ ಹರಿಜನರ ಬಗೆಗಿನ ಅನುಕಂಪ ಸಹಾನುಭೂತಿಗಳು ಸುವ್ಯಕ್ತವಾಗಿವೆ. ದ್ರವ್ಯ ಸಂಚಯ ಮಾಡುವುದು ಗಾಂಧೀಜಿಯವರ ಆದರ್ಶಕ್ಕೆ ವಿರೋಧವಾಗಿದ್ದಿತು. ಬಾ ತಮ್ಮ ಬಳಿಯಲ್ಲಿಟ್ಟುಕೊಂಡಿದ್ದ ಒಂದೆರಡು ರೂಪಾಯಿಗಳ ಸಮಾಚಾರ ಗಾಂಧೀಜಿಯವರಿಗೆ ಹೇಗೋ ತಿಳಿದು ಆಶ್ರಮದ ನಿವಾಸಿಗಳೆಲ್ಲರೆದುರಿಗೆ ಅದನ್ನು ಬಹಿರಂಗಪಡಿಸಿದರು. ಮತ್ತೊಮ್ಮೆ ಆಶ್ರಮದ ನಿವಾಸಿಯೊಬ್ಬರು ಅಸ್ವಸ್ಥರಾದಾಗ ಅವರಿಗೆ ತಕ್ಕ ಶುಶ್ರೂಷೆ ಮಾಡಲಿಲ್ಲವೆಂದು ತಿಳಿದು ಗಾಂಧೀಜಿ ಬಾ ಅವರನ್ನು ಎಲ್ಲರೆದುರಿಗೂ ಆಕ್ಷೇಪಣೆ ಮಾಡಿದರು. ಮರುಮಾತನಾಡದೆ ಬಾ ಈ ನೋವು ಅವಮಾನಗಳನ್ನು ನುಂಗಿದರು.



1917ರಲ್ಲಿ ರೈತರ ಉದ್ಧಾರಕ್ಕಾಗಿ ಗಾಂಧೀಜಿ ಚಂಪಾರಣ್ಯದಲ್ಲಿ ಚಳವಳಿ ಪ್ರಾರಂಭಿಸಿದಾಗ ಕಸ್ತೂರ ಬಾ ಎಂದಿನಂತೆ ಪತಿಯ ದಾರಿಯಲ್ಲಿ ಅತ್ಯಾನಂದದಿಂದ ನಡೆದರು. ಹಳ್ಳಿ ಹಳ್ಳಿಗೂ ಹೋಗಿ ಅಲ್ಲಿಯ ಜನರಿಗೆ ಶಿಸ್ತು, ಶುಚಿ, ಸದಾಚಾರ, ಸದ್ವರ್ತನೆಗಳನ್ನು ಹೇಳಿಕೊಟ್ಟರು. ಮುಂದೆ ಪತಿಯೊಡನೆ ಅವರು ಕೈಗೊಂಡ ರಾಷ್ಟ್ರಸೇವೆಗೆ ಈ ಚಳುವಳಿಯೇ ನಾಂದಿಯಾಯಿತು. ಅನಂತರ ಗಾಂಧೀಜಿ ಕೈಗೊಂಡ ಪ್ರತಿಯೊಂದು ಚಳವಳಿಯಲ್ಲೂ ಬಾ ಭಾಗವಹಿಸಿ ನಿರ್ಭಯದಿಂದ ತಮ್ಮ ಶಕ್ತಿಮೀರಿ ದೇಶಸೇವೆ ಮಾಡಿದರು. 1922ರ ಅಸಹಕಾರ ಚಳವಳಿಯ ಕಾಲದಲ್ಲಿ ಗಾಂಧೀಜಿಯವರು ಬಂಧನಕ್ಕೊಳಗಾದಾಗ ಅವರ ಸ್ಥಾನದಲ್ಲಿ ನಿಂತು ದಿಕ್ಕುಗೆಟ್ಟ ಜನತೆಗೆ ಮಾರ್ಗದರ್ಶನ ನೀಡಿ, ರಚನಾತ್ಮಕ ಹೋರಾಟಕ್ಕೆ ಕರೆಯಿತ್ತವರು ಕಸ್ತೂರ ಬಾ.

1930ರಲ್ಲಿ ಕಾನೂನುಭಂಗ ಚಳವಳಿಯ ಬಿಸಿ ದೇಶದೆಲ್ಲೆಡೆ ವ್ಯಾಪಿಸಿತು. ಆಗ ಕಸ್ತೂರ ಬಾ ವಿಶ್ರಾಂತಿಯಿಲ್ಲದೆ ಹಗಲಿರುಳು ಒಂದೇ ಸಮನಾಗಿ ದುಡಿದರು. ಜನತೆಯ ಕರೆ ಬಂದೆಡೆ ಅವರು ಪ್ರತ್ಯಕ್ಷರಾಗುತ್ತಿದ್ದರು. ಸ್ಥಳೀಯ ಮುಖಂಡರನ್ನು ಕಾಣುತ್ತ, ಆಯಾ ಪ್ರದೇಶಗಳ ವಿದ್ಯಮಾನಗಳನ್ನು ಪರಿಶೀಲಿಸುತ್ತ, ಅಗತ್ಯಬಿದ್ದಾಗ ಹೇಳಿಕೆಗಳನ್ನು ಕೊಡುತ್ತ, ಆಗಾಗ್ಗೆ ಆಸ್ಪತ್ರೆಗಳಿಗೆ ಹೋಗಿ ಸತ್ಯಾಗ್ರಹಿಗಳ ಯೋಗಕ್ಷೇಮವನ್ನು ವಿಚಾರಿಸುತ್ತ, ಜನತೆಯಲ್ಲಿ ಧೈರ್ಯವನ್ನು ತುಂಬುತ್ತ ಅವರು ಅವಿರತವಾಗಿ ಶ್ರಮಿಸುತ್ತಿದ್ದರು. ಪತಿಯ ಪ್ರತಿನಿಧಿಯಾಗಿ ಜನತೆಯ ಮಧ್ಯೆ ನಿಂತು ಕಾಂಗ್ರೆಸಿನ ಸೂತ್ರವನ್ನು ಹಿಡಿದು ಕಾರ್ಯಭಾರ ನಿರ್ವಹಿಸಿದ ರೀತಿ ಅತ್ಯಾಶ್ಚರ್ಯಕರವಾದುದು. ಅವರ ದೇಹದ ದುರ್ಬಲತೆಯನ್ನು ಗಮನಿಸಿ ವೈದ್ಯರು ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದಾಗ,



"ಬಾಪೂವಿನ ಸ್ಥಾನದಲ್ಲಿ ನಿಂತು, ಅವರ ಹಾಗೆ ಕೆಲಸ ಮಾಡುವ ಇಂಥ ಸಮಯಗಳು ನನ್ನ ಬಾಳಿನಲ್ಲಿ ಅಪೂರ್ವ. ಆದ್ದರಿಂದ ನನಗೀಗ ವಿಶ್ರಾಂತಿಯ ಯೋಚನೆಯೇ ಇಲ್ಲ" ಎಂದು ಉತ್ತರಿಸಿದರು.

ಅವರು ಮಾತೃವಾತ್ಸಲ್ಯದಿಂದ ಆಡುತ್ತಿದ್ದ ಮಾತುಗಳು ಜನತೆಯ ಹೃದಯವನ್ನು ನೇರವಾಗಿ ಮುಟ್ಟುತ್ತಿದ್ದುವು. ನೊಂದವರು ಸೋತವರು ಕುಗ್ಗಿದವರು ಆಕೆಯ ಆಶ್ರಯ ಬಯಸುತ್ತಿದ್ದರು. ಅವರಿಗೆ ಅಲ್ಲಿ ಅಪೂರ್ವವಾದ ಸಾಂತ್ವನ ದೊರೆಯುತ್ತಿತ್ತು. ಹೆಂಡತಿ ಮತ್ತು ಮಗಳನ್ನು ಕಳೆದುಕೊಂಡ ರೈತನೊಬ್ಬ ಮೂರು ತಿಂಗಳ ಕೂಸಿನೊಡನೆ ಬಾ ಅವರ ಬಳಿಗೆ ದೀನನಾಗಿ ಬಂದಾಗ ಬಾ ಅವನಿಗೆ ಆಶ್ರಯ ನೀಡಿದರು. ತನ್ನ ಒಬ್ಬನೇ ಮಗ ಬಾ ಅವರೊಂದಿಗೆ ಹಳ್ಳಿಹಳ್ಳಿಗಳನ್ನು ಸುತ್ತುತ್ತಿದ್ದುದನ್ನು ಕಂಡು ನೊಂದ ತಾಯಿಯೊಬ್ಬಳಿಗೆ ಬಾ ಹೇಳಿದರು : ನಿನಗೆ ಒಬ್ಬನೇ ಮಗನ ಯೋಚನೆ. ನನಗಾದರೋ ಮೂರು ಮಕ್ಕಳಿದ್ದಾರೆ. ಆದರೆ ಎಲ್ಲರೂ ದೂರವಿದ್ದಾರೆ. ಅವರು ದೇಶಕ್ಕಾಗಿ ದುಡಿಯುತ್ತಿದ್ದಾರೆಂಬುದೇ ನನಗೆ ತೃಪ್ತಿ. ಮೊರೆ ಹೊಕ್ಕವರನ್ನು ಮೃದುವಾದ ಮಾತುಗಳಿಂದ ಸಂತೈಸುವ ಜಾಣ್ಮೆ ಆಕೆಯಲ್ಲಿತ್ತು. ಆಕೆಯ ಮಾತುಗಳು ಜನತೆಗೆ ಅಮೃತಸೇಚನ ಮಾಡುತ್ತಿದ್ದವು.

ದೇಹಾರೋಗ್ಯವಿಲ್ಲದಿದ್ದರೂ ಬಾ ದುರ್ಗಮವಾದ ದಾರಿಗಳಲ್ಲಿ ನಡೆದು, ಹಳ್ಳಿಹಳ್ಳಿಗೆ ಹೋಗಿ, ಜನರಲ್ಲಿ ಉತ್ಸಾಹ ಚೈತನ್ಯಗಳನ್ನು ತುಂಬುತ್ತಿದ್ದರು; ಅವರಿಗೆ ಅಗತ್ಯವಾದ ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿದ್ದ ದೃಢನಿರ್ಧಾರ, ಆತ್ಮಸಂಯಮಗಳು ದೇಹ ದೌರ್ಬಲ್ಯವನ್ನು ಮೆಟ್ಟಿ ನಿಂತವು.

ಈ ಅವಿರತವಾದ ದೇಶಪರ್ಯಟನೆಯಲ್ಲಿ ಅವರು ತಮ್ಮ ನಿತ್ಯನಿಯಮಗಳನ್ನೆಂದು ಮೀರಿ ನಡೆದವರಲ್ಲ. ಆಶ್ರಮದಲ್ಲಿದ್ದಾಗ ನಡೆಯುತ್ತಿದ್ದಂತೆಯೇ ಪ್ರಾತಃಕಾಲ ನಾಲ್ಕು ಗಂಟೆಗೇ ಎದ್ದು ದೇವರ ಪ್ರಾರ್ಥನೆ ಮಾಡಿ, ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಅವರ ಆಹಾರ ಜೋಳದ ರೊಟ್ಟಿ ಮತ್ತು ಉಪ್ಪಿಲ್ಲದ ಒಂದಿಷ್ಟು ತರಕಾರಿ. ಸರಳತೆ ಅವರ ಬದುಕಿನ ಜೀವಾಳ. ಅಬ್ಬರ ಆಡಂಬರಗಳಿಗೂ ಅವರಿಗೂ ಬಹುದೂರ. ದಿಕ್ಕುಗೆಟ್ಟ ಜನರನ್ನು ಹುರಿದುಂಬಿಸಿ ಒಟ್ಟುಗೂಡಿಸುವ ಶಕ್ತಿ, ಹಿಡಿದ ಕಾರ್ಯದಲ್ಲಿ ಶ್ರದ್ಧೆಭಕ್ತಿಗಳನ್ನಿಟ್ಟು ಅದನ್ನು ನಿರ್ವಹಿಸುವ ಸಾಮರ್ಥ್ಯ, ಸರಸವಾಗಿ ಮಾತಾಡಿ ಜನರನ್ನು ಗೆಲ್ಲುವ ಬಲ್ಮೆ, ನಿರಾಶೆಯಲ್ಲಿ ಮಂಕು ಕವಿದು ಕಾರ್ಯಭಂಗವಾಗದಂತೆ ಮುಂದುವರಿಯುವ ಮೇಲ್ಮೆ, ಗುರಿಯನ್ನಾಗಲಿ ಗಂಡ ಹಾಕಿಕೊಟ್ಟ ಮೇಲ್ಪಂಕ್ತಿಯನ್ನಾಗಲಿ ಮರೆಯದಂತೆ ತಪ್ಪದೆ ನೆರವೇರಿಸುವ ನಿಷ್ಠೆ ಈ ಎಲ್ಲ ಗುಣಗಳು ಅವರ ರಾಷ್ಟ್ರಸೇವಾಕಾರ್ಯದಲ್ಲಿ ಬೆಳಕಿಗೆ ಬಂದುವು.

ಈ ಎಲ್ಲ ಚಟುವಟಿಕೆಗಳಲ್ಲಿ ತೊಡಗಿದ್ದಾಗ 1932 ರಲ್ಲಿ ಕಸ್ತೂರ ಬಾ ಸೆರೆಮನೆಗೆ ಹೋಗಬೇಕಾಯಿತು. ಬಾರ್ಡೋಲಿಯ ಸೆರೆಮನೆಯಲ್ಲಿ ಆರು ತಿಂಗಳ ಕಠಿಣ ಕಾರಾಗೃಹ ವಾಸವನ್ನೂ ಧೈರ್ಯದಿಂದ ಎದುರಿಸಿದರು. 1935 ರ ಅನಂತರ ಗಾಂಧೀಜಿ ಚಳವಳಿ ನಿಲ್ಲಿಸಿ ವರ್ಧಾ ಬಳಿ ಸೇವಾಗ್ರಾಮದಲ್ಲಿ ತಮ್ಮ ಹೊಸ ಆಶ್ರಮ ಸ್ಥಾಪಿಸಿದರು. ಕಸ್ತೂರ ಬಾ ಅವರೇ ಆಶ್ರಮದ ಮೇಲ್ವಿಚಾರಣೆಯ ಹೊಣೆ ಹೊತ್ತರು. ಆ ವೇಳೆಗೆ ವಯಸ್ಸು ಮಾರ್ಪಾಡುಗಳನ್ನುಂಟು ಮಾಡಿದ್ದರೂ ಮನಸ್ಸು ಮಾತ್ರ ಚಿರತಾರುಣ್ಯದ ಚೆಲುಮೆಯಾಗಿತ್ತು. ಅನಾರೋಗ್ಯದಿಂದ ದೇಹದಾರ್ಢ್ಯ ಕುಗ್ಗಿದ್ದರೂ ಉತ್ಸಾಹ ತಗ್ಗಿರಲಿಲ್ಲ. ಆಶ್ರಮದ ನಿತ್ಯಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದ ಅವರನ್ನು ನೋಡಿದರೆ ಆಕೆ ಒಬ್ಬ ಆದರ್ಶ ಗೃಹಿಣಿಯಂತೆ ಕಂಡುಬರುತ್ತಿದ್ದರೇ ಹೊರತು ದೇಶಕ್ಕಾಗಿ ಜೀವವನ್ನೇ ಮುಡುಪಿಟ್ಟು ಸಹಸ್ರಾರು ಸಂಕಷ್ಟಗಳನ್ನನುಭವಿಸಿದ ನಾಯಕಿಯಂತೆ ಕಂಡುಬರುತ್ತಿರಲಿಲ್ಲ.

ಇಷ್ಟರಲ್ಲಿ ಕಸ್ತೂರ ಬಾ ಮಾತೃ ಹೃದಯಕ್ಕೆ ದೊಡ್ಡ ಆಘಾತವನ್ನುಂಟುಮಾಡಿದ ಒಂದು ಸನ್ನಿವೇಶ ಒದಗಿತು. ಅದು ಆಕೆಯ ಮಗ ಹೀರಾಲಾಲ್ ಕೆಲವು ಕೆಟ್ಟ ಚಟಗಳನ್ನು ಕಲಿತರು . ಮುಸಲ್ಮಾನ್ ಮತಕ್ಕೆ ಸೇರಿದರು . . ಆ ಸಮಯದಲ್ಲಿ ಆಕೆ ಮಗನಿಗೆ ಬರೆದ ದೀರ್ಘಪತ್ರದಲ್ಲಿ ಮಾತೃಹೃದಯದ ವೇದನೆ ವ್ಯಕ್ತವಾಗುತ್ತದೆ. ಆಕೆಯ ಮಮತೆ ಕುರುಡಾಗಿರಲಿಲ್ಲ. ಅವರು ಬಿಚ್ಚುಹೃದಯದಿಂದ ಮಗನ ವರ್ತನೆಯನ್ನು ಅದರಲ್ಲಿ ಖಂಡಿಸಿದ್ದಾರೆ. ಅದರಲ್ಲಿ ಕೋಪದ ಬಿಸಿಯಿಲ್ಲ, ಪಶ್ಚಾತ್ತಾಪದ ಕಣ್ಣೀರಿದೆ. ಬಾ ಅಪೂರ್ವ ಸಹನೆಯಿಂದ ಸಂಕಟವನ್ನು ನುಂಗಿದರು; ದೇಶಕ್ಷೇಮದಲ್ಲಿ ಮೈಮರೆತರು.




1939 ರಲ್ಲಿ ರಾಜಕೋಟೆಯಲ್ಲಿ ಮತ್ತೆ ಆಂದೋಲನ ನಡೆದಾಗ ಕಸ್ತೂರ ಬಾ ದೇಹ ದುರ್ಬಲವಾಗಿದ್ದರೂ ಚಳವಳಿಯಲ್ಲಿ ಭಾಗವಹಿಸಿ ಮತ್ತೆ ಸೆರೆ ಸೇರಿದರು. ಆ ಕಾಲದಲ್ಲೇ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡಿದ್ದು. ಇದರಿಂದ ಮೊದಲಿಗೆ ಬಾ ತಳಮಳಗೊಂಡರೂ ಅನಂತರ ಪತಿಯ ಕ್ಷೇಮಕ್ಕಾಗಿ ಭಗವಂತನಲ್ಲಿ ಸಂಪೂರ್ಣ ಶರಣಾದರು. ಗಾಂಧೀಜಿ ಉಪವಾಸ ಕೈಗೊಂಡಾಗಲೆಲ್ಲ ಅವರು ಭಗವಂತನಲ್ಲಿ ಮೊರೆ ಹೋಗುತ್ತಿದ್ದರು. ಭಗವಂತನಲ್ಲಿದ್ದ ಅವರ ಈ ಅಚಲವಾದ ಶ್ರದ್ಧಾಭಕ್ತಿಗಳು ಗಾಂಧೀಜಿಗೆ ವಜ್ರಕವಚದಂತಿದ್ದುವು. ರಾಜಕೋಟೆಯ ಪ್ರಕರಣ ಮುಗಿದ ಮೇಲೆ ಗಾಂಧೀದಂಪತಿಗಳು ಮತ್ತೆ ಸೇವಾಗ್ರಾಮವನ್ನು ಸೇರಿದರು.

1942 ರಲ್ಲಿ ಸ್ವಾತಂತ್ರ್ಯ ಚಳವಳಿಯ ಜ್ವಾಲೆ ಮತ್ತೊಮ್ಮೆ ದೇಶವನ್ನೆಲ್ಲ ವ್ಯಾಪಿಸಿತು. ಆಗಸ್ಟ್ 9ರಂದು ಗಾಂಧೀಜಿಯಾದಿಯಾಗಿ ದೇಶದ ನಾಯಕರೆಲ್ಲ ಸೆರೆ ಸೇರಿದರು. ಅದೇ ಸಂಜೆ ಗಾಂಧೀಜಿ ಬೊಂಬಾಯಿಯ ಶಿವಾಜಿಪಾರ್ಕಿನಲ್ಲಿ ಉಪನ್ಯಾಸ ಮಾಡಬೇಕಾಗಿತ್ತು. ಪತಿಯ ಪ್ರತಿನಿಧಿಯಾಗಿ ಕಸ್ತೂರ ಬಾ ಆ ಕೆಲಸವನ್ನು ನಿರ್ವಹಿಸಲು ನಿರ್ಧರಿಸಿದರು. ಆದರೆ ಅಷ್ಟರಲ್ಲಿಯೇ ಪೋಲೀಸರು ಆಕೆಯನ್ನು ಬಂಧಿಸಿ ಪುಣೆಯ ಆಗಾಖಾನ್ ಅರಮನೆಯಲ್ಲಿದ್ದ ಸೆರೆಮನೆಗೆ ಒಯ್ದರು.

1943ರ ಮಾರ್ಚ್ 12 ರಂದು ಕಸ್ತೂರ ಬಾ ಎರಡು ಬಾರಿ ಹೃದಯವೇದನೆಗೊಳಗಾದರು. ಅಲ್ಲಿಂದಾಚೆಗೆ ಅವರ ಆರೋಗ್ಯ ಕ್ಷೀಣಿಸುತ್ತ ಬಂತು. 1944 ರ ಫೆಬ್ರವರಿ 22ರ ಮಹಾಶಿವರಾತ್ರಿಯಂದು ಪತಿಯ ತೊಡೆಯ ಮೇಲೊರಗಿದ್ದಂತೆಯೇ ಬಾ ಅವರ ಆತ್ಮ ಅನಂತದಲ್ಲಿ ಲೀನವಾಗಿ ಯೋಯಿತು. ಆ ಮಹಾಸತಿಯ ಪಾರ್ಥಿವಶರೀರ ಕಣ್ಮರೆಯಾದರೂ ಆಕೆಯ ಕೀರ್ತಿ ಅಜರಾಮರವಾಯಿತು. ಸಹನೆ ಸಂಯಮ ಔದಾರ್ಯಗಳು ಆಕೆಯಲ್ಲಿ ಮುಪ್ಪುರಿಗೊಂಡಿದ್ದುವು. ಯಾವ ಮಹತ್ವಾಕಾಂಕ್ಷೆಯಾಗಲೀ, ಕೀರ್ತಿಕಾಮನೆಯಾಗಲಿ ಅವರಲ್ಲಿರಲಿಲ್ಲ. ಸಂಕುಚಿತ ಸಂಸಾರದ ಅನುರಾಗ ಅಭಿಮಾನಗಳನ್ನು ತೊರೆದು ವಿಶ್ವಕುಟುಂಬದ ಹೊಣೆ ಹೊತ್ತು ದೇಶಸೇವೆಗಾಗಿ ಗಂಡ ಮತ್ತು ಮಕ್ಕಳನ್ನು ಬಿಟ್ಟುಕೊಟ್ಟು ಅನನ್ಯ ತ್ಯಾಗವನ್ನು ಮೆರೆದರು.

(ಮಾಹಿತಿ ಆಧಾರ: ಮೈಸೂರು ವಿಶ್ವಕೋಶ)

ಮಾಹಿತಿ ಆಧಾರ: ಮೈಸೂರು ವಿಶ್ವಕೋಶ
(ಲೇಖನ ಕೃಪೆ : ಕನ್ನಡ ಸಂಪದ, ಫೇಸ್ ಬುಕ್ ಪುಟ)



ಕರ್ನಾಟಕದ ಹೆಮ್ಮೆ

ಕಡಿದಾಳ್ ಮಂಜಪ್ಪ

– ಪ್ರೊ. ಜಿ. ಬಿ. ಶಿವರಾಜು

ಮಹಾತ್ಮ ಗಾಂಧಿಯವರ ಜೀವನ ಆದರ್ಶಗಳನ್ನು ಅಪ್ಪಿಕೊಂಡು ಬದುಕಿದ್ದ ಮಾಜಿ ಮುಖ್ಯಮಂತ್ರಿ ಶ್ರೀ.ಕಡಿದಾಳ್‌ಮಂಜಪ್ಪ ಅವರು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಎದ್ದು ಕಾಣುವ ವ್ಯಕ್ತಿಯಾಗಿ ಉಳಿದಿದ್ದಾರೆ .

ರಾಜ್ಯದ ಮುಖ್ಯಮಂತ್ರಿಗಳಾಗಿ, ಸಚಿವರಾಗಿ ಮತ್ತು ಗಾಂಧಿ ಭವನದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಗಾಂಧೀವಾದಿ ಶ್ರೀ ಕಡಿದಾಳ್‌ಮಂಜಪ್ಪ ಅವರು ಈ ನಾಡಿನ ಧೀಮಂತ ಚೇತನ. ಗಾಂಧೀಜಿ ಅವರ ತತ್ವ ಸಿದ್ಧಾಂತಗಳನುಸಾರ ಅಜೀವ ಪರ್ಯಂತ ಕರ್ತವ್ಯ ನಿರ್ವಹಿಸುತ್ತಿದ್ದರು. ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಕಡಿದಾಳ್ ಗ್ರಾಮದ ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದ ಕಡಿದಾಳರು ಸ್ವಪ್ರತಿಭೆ, ಹೋರಾಟ, ಜನಪರ ಕೆಲಸಗಳ ಮೂಲಕ ಮುಖ್ಯವಾಹಿನಿಗೆ ಬಂದವರು.

ಗಾಂಧೀಜಿ, ನೆಹರು, ಸುಭಾಷ್‌ಚಂದ್ರ ಬೋಸ್, ವಲ್ಲಭಬಾಯ್ ಪಟೇಲ್, ಜಯಪ್ರಕಾಶ್ ನಾರಾಯಣ, ಮೊದಲಾದ ಸ್ವಾತಂತ್ರ್ಯ ಹೋರಾಟಗಾರರ ಸಂಪರ್ಕಕ್ಕೆ ಬಂದ ಮಂಜಪ್ಪ ಅವರು ಈಸೂರು ಸತ್ಯಾಗ್ರಹ, ಅಸಹಕಾರ ಚಳುವಳಿ, ಭಾರತ ಬಿಟ್ಟು ತೊಲಗಿ ಸತ್ಯಾಗ್ರಹದಲ್ಲಿ ಭಾಗಿಯಾಗುತ್ತಾ, ಕಾಂಗ್ರೆಸ್ ಪಕ್ಷದ ಪ್ರಮುಖ ಕಾರ್ಯಕರ್ತನಾಗಿ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಗಾಂಧಿ ಅವರ ಸತ್ಯ, ಅಹಿಂಸೆ, ನ್ಯಾಯದ ಸಿದ್ಧಾಂತದೊಡನೆ ಸಾರ್ವಜನಿಕ ಜೀವನದಲ್ಲಿ ಪಾಲ್ಗೊಂಡ ಕಡಿದಾಳರು ಭ್ರಷ್ಟಾಚಾರ ರಹಿತ ಆಡಳಿತ, ಸ್ವಜನ ಪಕ್ಷಪಾತ ರಹಿತ ಸರ್ಕಾರ ರಚಿಸಿ ದೇಶಕ್ಕೆ ಬಹುದೊಡ್ಡ ನಿದರ್ಶನವಾಗಿದ್ದಾರೆ.

"ಭೂಸುಧಾರಣಾ ಕಾಯ್ದೆಯ ರೂವಾರಿ" ಎಂದೇ ಗುರುತಿಸಲ್ಪಟ್ಟಿರುವ ಕಡಿದಾಳ್ ಮಂಜಪ್ಪನವರು ಕರ್ನಾಟಕ ಕಂಡ ವಿರಳ ರಾಜಕಾರಣಿ. ತಾವು ಒಪ್ಪಿಕೊಂಡ ಮೌಲ್ಯಯುತ ಜೀವನ ದೃಷ್ಟಿಗೆ ಅನೇಕ ಅಡ್ಡಿ ಆತಂಕಗಳು ಒದಗಿ ಬಂದಾಗಲೂ ಉನ್ನತ ಪದವಿಗೆ ಆಸೆ ಪಡದೆ, ರಾಜಿಮಾಡಿಕೊಳ್ಳದೆ ಪರಿಸ್ಥಿತಿಯನ್ನು ದಿಟ್ಟವಾಗಿ ಎದುರಿಸಿ ತಮ್ಮ ಗುಣ ಸಂಪನ್ನತೆಯನ್ನು ಮೆರೆದಿದ್ದಾರೆ. ರಾಮಕೃಷ್ಣಾಶ್ರಮದ ಉಪದೇಶಗಳಿಂದ ಪ್ರಭಾವಿತರಾಗಿ ವ್ಯಾಸಂಗ ಮುಗಿದ ಮೇಲೆ ಆಶ್ರಮವನ್ನು ಸೇರಿ ಸನ್ಯಾಸಿಯಾಗಬೇಕೆಂದು

"ಹಿರಿಯರನ್ನು ಜ್ಞಾಪಿಸುವುದು ಅವರ ಉದ್ಧಾರಕ್ಕಲ್ಲ, ಯುವಪೀಳಿಗೆಗೆ ಸೂಕ್ತಮಾರ್ಗದರ್ಶನಕ್ಕಾಗಿ ಅವರನ್ನು ನೆನೆಯದಿದ್ದರೆ ಹಿರಿಯರಿಗೆ ನಷ್ಟವಿಲ್ಲ. ಇದರಿಂದ ಮುಂದಿನ ಜನಾಂಗಕ್ಕೆ ಅಪಾರ ನಷ್ಟವಾಗುತ್ತದೆ" ಎಂಬ ಗಾಂಧೀಜಿ ಅವರ ವಾಣಿಯಂತೆ ಕಡಿದಾಳ್ ಮಂಜಪ್ಪನವರಂತಹ ತ್ಯಾಗ ಜೀವಿಗಳ ವ್ಯಕ್ತಿ ವಿಚಾರಗಳನ್ನು ಯುವಜನರಲ್ಲಿ ಬಿತ್ತಿ ಒಂದು ಆದರ್ಶ ಸಮಾಜ ನಿರ್ಮಾಣ ಮಾಡಬೇಕೆಂಬ ಉದ್ದೇಶ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯದ್ದು.



ಶ್ರೀ ಕಡಿದಾಳ್‌ಮಂಜಪ್ಪ ಅವರ ಜೀವನ ಪಯಣ

ಜನನ : 1907ನೇ ಜುಲೈ 10 ಹಾರೋಗೊಳಿಗೆ, ಶಿವಮೊಗ್ಗ.

(ಜಾತಕದ ಪ್ರಕಾರ 13.07.1907 ತಂದೆ ದುಗ್ಗಣ್ಣಗೌಡ । ತಾಯಿಚೆನ್ನಮ್ಮ

1913	ಕನ್ನಡ ಕಲಿಕೆ (ತೀರ್ಥಹಳ್ಳಿಯ ಕೂಲಿಮಠದಲ್ಲಿ)
1917	ಪ್ರಾಥಮಿಕ ಶಿಕ್ಷಣ (ತೀರ್ಥಹಳ್ಳಿ)
1918	ಪ್ರೌಢ ಶಿಕ್ಷಣ (ಬೆಂಗಳೂರು)
1919	ಪ್ರೌಢ ಶಿಕ್ಷಣ (ಶಿವಮೊಗ್ಗ)
1921	ತಂದೆಯ ನಿಧನ
1920–1921	ಬಿ.ಎ.ಪದವಿ (ಮೈಸೂರು)
1927	ಗಾಂಧಿ ಅವರ ದರ್ಶನ
1932	ಬಿ.ಎಲ್.ಪದವಿ (ಪೂನಾದ ಕಾನೂನು ಕಾಲೇಜು)
1935–36	ವಕೀಲ ವೃತ್ತಿ (ಶಿವಮೊಗ್ಗ)
1940ರ ಮೇ	ವಿವಾಹ
1938	ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗಿ ಮತ್ತು ಜೈಲುವಾಸ (ಶಿವಪುರ, ಮದ್ದೂರು)
1938	ಕಾಂಗ್ರೆಸ್ ಸದಸ್ಯ
1939	ಅರಣ್ಯ ಸತ್ಯಾಗ್ರಹ, ಜೈಲುವಾಸ
1941	ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ತೀರ್ಥಹಳ್ಳಿ ಕ್ಷೇತ್ರದಿಂದ ಆಯ್ಕೆ
1942	ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗಿ
	ಗೇಣಿದಾರರ ಸಂಘಟನೆ
1945	ನ್ಯಾಯ ವಿಧೇಯಕ ಸಭೆಗೆ ಆಯ್ಕೆ
1950	ಮೈಸೂರಿನ ಗಾಂಧಿ ಎಂದು ಕರೆದಿದ್ದಾರೆಂದ ಎಚ್.ಸಿ.ದಾಸಪ್ಪ ಹೇಳಿಕೆ
1951	ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವ ಸರ್ಕಾರಕ್ಕಾಗಿ ಚಳುವಳಿ ಮತ್ತು ಸೆರೆವಾಸ
1952	ತೀರ್ಥಹಳ್ಳಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆ
	ಮುಖ್ಯಮಂತ್ರಿ ಶ್ರೀ.ಕೆಂಗಲ್ ಹನುಮಂಯ್ಯ ಸಚಿವ ಸಂಪುಟದಲ್ಲಿ ಕಂದಾಯ ಮತ್ತು ಲೋಕೋಪಯೋಗಿ ಇಲಾಖೆ

1952 ರಿಂದ 1956 ರವರೆಗೆ ಸಚಿವರಾಗಿ ಕಾರ್ಯ ನಿರ್ವಹಣೆ

- ಈ ಅವಧಿಯಲ್ಲಿ ಮೈಸೂರು ಗೇಣಿಶಾಸನ, ಮೈಸೂರು ಇನಾಂ ರದ್ದತಿ,
- ಮುಂತಾದ ಸಮಾಜಕ್ಕೆ ಪೂರಕ ಕಾನೂನು ಮಂಡನೆ 1953–1954
- ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ 1956 (74 ದಿನಗಳು)
- ಶೃಂಗೇರಿ ಮತಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಅವಿರೋಧ ಆಯ್ಕೆ
- ಮುಖ್ಯಮಂತ್ರಿ ಬಿ.ಡಿ.ಜತ್ತಿ ಸಚಿವ ಸಂಪುಟದಲ್ಲಿ ಕಂದಾಯ ಸಚಿವರಾಗಿ ಕಾರ್ಯನಿರ್ವಹಣೆ

1958	ಕರ್ನಾಟಕ ಭೂಸುಧಾರಣಾ ಕಾಯ್ದೆ ಜಾರಿ
1960	ಭದ್ರಾ ಅಚ್ಚುಕಟ್ಟು, ಲಿಂಗಾಪುರ, ಉಂಬ್ಳೆಬೈಲಿನಲ್ಲಿ
1960	ಅಚ್ಚುಕಟ್ಟು ನಿರ್ಮಾಣ, ನೀರಾವರಿ ವ್ಯವಸ್ಥೆ
1960	ಸ್ಕಾಲರ್‌ಶಿಫ್ ಮತ್ತು ಆಡ್ಮಿಷನ್ ಕಮಿಟಿ ಸದಸ್ಯರಾಗಿ ಸೇವೆ
1962	ರಾಜಕೀಯ ನಿವೃತ್ತಿ, ಕಾಂಗ್ರೆಸ್ ಅಧ್ಯಕ್ಷ ಕಾಮರಾಜ್ ನಾಡಾರ್ ಅವರಿಗೆ ರಾಜಿನಾಮೆ ಪತ್ರ
1975	ಜೆ.ಪಿ.ಅವರೊಂದಿಗೆ ನವ ನಿರ್ಮಾಣ ಕ್ರಾಂತಿ

1975	ಸಂಸದೀಯ ವ್ಯವಹಾರಗಳ ಸಂಸ್ಥೆಗೆ ಆಶ್ರಯದಾತರು ಚುನಾವಣೆ ಕಾವಲು ಸಮಿತಿ ಅಧ್ಯಕ್ಷತೆ,
1975	ರಾಷ್ಟ್ರೀಯ ಜಾಗೃತಿ ಮಂಡಳಿ ನೇತಾರ
1975–1985	ಗಾಂಧಿ ಭವನದ ಅಧ್ಯಕ್ಷರಾಗಿ ಸೇವೆ
1978	ರಾಜ್ಯಪಾಲರಾಗುವ ಅವಕಾಶ ನಿರಾಕರಣೆ
1980	ಕಾಂಗ್ರೆಸ್ ಫಾರ್ ಡೆಮಾಕ್ರಸಿ ಪಕ್ಷದ ಕರ್ನಾಟಕ ಶಾಖೆಯ ಅಧ್ಯಕ್ಷ
1980	ಇಂದಿರಾ ಗಾಂಧಿಯ ಸರ್ವಾಧಿಕಾರವನ್ನು ಟೀಕಿಸಿದ್ದ ಇವರು, ಅವರ ಪಕ್ಷ ಯಶಸ್ವಿಯಾದಾಗ ಅವರಿಗೆ ಸ್ವಾಗತ ಕೋರಿದ್ದು
1982	ರಾಷ್ಟ್ರೀಯ ಜಾಗೃತಿ ಮಂಡಳಿ

ಸಾಹಿತಿಯಾಗಿ – ಕೃತಿಗಳು

- ಪಂಜರವಳ್ಳಿಯ ಪಂಜು(1962)
- ನಾಳೆಯ ನೆರಳು (1966)
- ಕ್ರಾಂತಿಕೂಟ (1975)
- ನನಸಾಗದ ಕನಸು (ಆತ್ಮಕಥೆ) – 1990
- ಹೊಟ್ಟೆ ಹುಣ್ಣಿನ ಕಾಯಿಲೆ (1991)

ಮಾರ್ಚ್ 8, 1992 ನಿಧನ





ಬಯಸಿದ್ದರು. ಶಿವಮೊಗ್ಗದ ಪ್ರೌಢಶಾಲೆಯಲ್ಲಿ ಮಂಜಪ್ಪ ಅವರು ವ್ಯಾಸಂಗ ಮಾಡುವಾಗ 1927 ರಲ್ಲಿ ಗಾಂಧೀಜಿ ಭೇಟಿಕೊಟ್ಟಾಗ ಅವರಿಂದ ಪ್ರಭಾವಿತರಾಗಿ ಜೀವನ ಪರ್ಯಂತ ಗಾಂಧಿ ಅನುಯಾಯಿಯಾಗಿ ಆದರ್ಶದ ಬದುಕು ನಡೆಸಿದರು.

ಮೈಸೂರಿನ ಮಹಾರಾಜರಾದ ಶ್ರೀಜಯಚಾಮರಾಜೇಂದ್ರ ಒಡೆಯರ್ ಬೆಂಗಳೂರಿನ ಪ್ರತಿಷ್ಠಿತ ಪ್ಯಾಲೇಸ್ ಆರ್ಚರ್ಡ್ ಬಡಾವಣೆಯಲ್ಲಿ ಒಂದು ಎಕರೆ ಭೂಮಿ ನೀಡಲು ಮುಂದಾದಾಗ ಅದನ್ನು ವಿನಮ್ರವಾಗಿ ನಿರಾಕರಿಸಿದರು .

ಭಾರತದ ಪ್ರಧಾನಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಇವರಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಎಂದು ಆಹ್ವಾನಿಸಿದಾಗ ಆ ಹುದ್ದೆಯನ್ನು ನನಗಿಂತ ಹಿರಿಯರಾದ ಬಿ.ಡಿ.ಜತ್ತಿ ಅವರಿಗೆ ನೀಡುವಂತೆ ವಿನಂತಿಸಿಕೊಂಡರು . ಸರ್ಕಾರವು 1945 ರಲ್ಲಿ ಅವರನ್ನು ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ಆಹ್ವಾನಿಸಿದಾಗ ಮತ್ತು 1962 ರಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಶ್ರೀ.ಸೋಮನಾಥ ಅಯ್ಯರ್ ರವರು ಕಡಿದಾಳ್ ಮಂಜಪ್ಪನವರನ್ನು ಹೈಕೋರ್ಟ್



ಕಡಿದಾಳು ಮಂಜಪ್ಪನವರು ಈಗ ಜೀವಿಸಿಲ್ಲ. ಆದರೆ ಬದುಕಿದ್ದಾರೆ. ಬದುಕಿನಲ್ಲಿ ಉಳಿಯುವಂತಹ ಜೀವನವನ್ನು ಅವರು ಬದುಕಿದರು

ನ್ಯಾಯಾಧೀಶರಾಗಲು ಆಹ್ವಾನಿಸಿದಾಗ ಹಾಗೂ ಶ್ರೀ.ಬಿ.ಡಿ.ಜತ್ತಿ ಅವರು ಇವರಿಗೆ ರಾಜ್ಯಪಾಲರಾಗಿ ಎಂದು ಆಹ್ವಾನ ನೀಡಿದಾಗಲೂ ಈ ಹುದ್ದೆಗಳನ್ನು ಸೇರದೆ ವಿನಮ್ರವಾಗಿ ದೂರ ಉಳಿದ ಪ್ರಸಂಗಗಳು ಜನಮಾನಸದಲ್ಲಿ ಉಳಿದಿವೆ.

ಕಡಿದಾಳ್ ಮಂಜಪ್ಪನವರ ನುಡಿಮುತ್ತುಗಳು

ರಾಜಕಾರಣದಲ್ಲಿ ನಾನೊಬ್ಬನೇ ಪ್ರಾಮಾಣಿಕನೆಂದು ಕೊಚ್ಚಿಕೊಳ್ಳುವ ಕೆಚ್ಚು ನನಗಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ನನಗಿಂತಲೂ ಹೆಚ್ಚು ತ್ಯಾಗಮಾಡಿದ್ದ ಹಾಗೂ ನನಗಿಂತಲೂ ಹೆಚ್ಚು ಪ್ರಾಮಾಣಿಕತೆಯಿಂದ ಬಾಳಿದ್ದ ಹಿರಿಯ ಸ್ವಾತಂತ್ರ್ಯ ಯೋಧರಲ್ಲಿ ಅನೇಕರು ಒಬ್ಬೊಬ್ಬರಾಗಿ ಬಹಳ ಹಿಂದೆಯೇ ಕಣ್ಮರೆಯಾದರು . ಈಗಲೂ ಕೂಡ ಕೆಲವರು ಹಿರಿಯ ಸ್ವಾತಂತ್ರ್ಯಯೋಧರು ತಾವು ನಂಬಿದ್ದ ಆದರ್ಶವನ್ನು ಕೈಬಿಡದೆ ಬಡತನದ ಜೀವನವನ್ನು ಸಾಗಿಸುತ್ತಿದ್ದಾರೆ. ಅಂತಹವರ ಪೈಕಿ ಅಗ್ರಸ್ಥಾನ ಶ್ರೀ ಗುಲ್ಜಾರಿ ಲಾಲ್ ನಂದಾ ಅವರಿಗೆ ಸಲ್ಲತಕ್ಕದ್ದು. ಕರ್ನಾಟಕದಲ್ಲೂ ಕೂಡ ಕೆಲವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಇನ್ನೂ ಬದುಕಿ ಉಳಿದಿದ್ದು ಬಡತನದ ಜೀವನವನ್ನು ಸಾಗಿಸುತ್ತಿದ್ದಾರೆ. ಮೈಸೂರು ನಗರದ ಶ್ರೀ ಎಂ.ಎನ್ ಜೋಯಿಸ್‌ರವರು ನನಗಿಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ನಾನು ಕಂದಾಯ ಮಂತ್ರಿಯಾಗಿದ್ದಾಗ ಅವರಿಗೆ ಇಪ್ಪತ್ತೈದು ಎಕರೆ ಜಮೀನನ್ನು ಮಂಜೂರು ಮಾಡುವುದಾಗಿ ಹೇಳಿದ್ದೆ. ಆಗ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದುದು ಜಮೀನು ಪಡೆಯುವ ಉದ್ದೇಶದಿಂದಲ್ಲ ಎಂದು ನನಗೆ ಹೇಳಿದ್ದರು. ಈಗಲೂ ಕೂಡ ಅವರು ಮೈಸೂರಿನಲ್ಲಿ ಒಂದು ಕೈಹೆಂಚಿನ ಮನೆಯಲ್ಲಿ ವಾಸಮಾಡುತ್ತಾರೆಂದು ಕೇಳಿದ್ದೇನೆ.

ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಪಿಂಚಣಿ ವೇತನಕ್ಕಾಗಿ ಅರ್ಜಿಸಲ್ಲಿಸಲು ಇದುವರೆಗೆ ನನಗ್ಯಾಕೋ ಮನಸ್ಸು ಬರಲಿಲ್ಲ. ಪ್ರಾಮಾಣಿಕತೆಯೂ ಐಶ್ವರ್ಯವೂ ಒಟ್ಟಾಗಿರಲು ಸಾಧ್ಯವೇ ಇಲ್ಲ. ಪ್ರಾಮಾಣಿಕರಾಗಿದ್ದವರು ಜೀವನ ನಿರ್ವಹಣೆಗಾಗಿ ಕಷ್ಟಪಡಲೇಬೇಕು. ನಾನು ನನ್ನ ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕನಾಗಿ ಬಾಳಿದ್ದಕ್ಕೆ ಹೆಮ್ಮೆ ಪಡುತ್ತೇನೆಯೇ ಹೊರತು ಪಶ್ಚಾತಾಪ ಪಡುವುದಿಲ್ಲ.

"ರಾಜಕಾರಣದಲ್ಲಿ ಆದರ್ಶವಿದ್ದರೆ, ಆಡಳಿತ ದಕ್ಷತೆಯಿಂದ ಇದ್ದರೆ ಜನರಲ್ಲಿ ಶಿಸ್ತು, ಸಂಯಮಗಳಿದ್ದರೆ, ದೇಶದಲ್ಲಿ ಒಗ್ಗಟ್ಟಿದ್ದರೆ, ದುರ್ಬಲ ವರ್ಗದವರ ಸಮಸ್ಯೆಗಳು, ದೇಶದ ಇತರ ಸಮಸ್ಯೆಗಳು ಪರಿಹಾರವನ್ನು ಕಾಣುತ್ತವೆ. ನಮಗೆ ಸದಾ ನಮ್ಮ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಚಿಂತೆ. ನಮ್ಮ ಜವಾಬ್ದಾರಿ ಏನೆಂಬುದನ್ನು ಕುರಿತು ಯೋಚಿಸುವುದೇ ಇಲ್ಲ. ಈ ದೇಶದಲ್ಲಿ ದಾರಿದ್ರ ನಿವಾರಣೆಯಾಗ ಬೇಕಾದರೆ ರಾಜಕಾರಣದ ರೀತಿ ನೀತಿಗಳಲ್ಲಿ ಮಹತ್ತರವಾದ ಬದಲಾವಣೆ ಆಗಬೇಕು . ನಮಗೂ ನಮ್ಮ ನಾಯಕರಿಗೂ ದಿಟ್ಟತನದ ಹೊಸ ಸಂಕಲ್ಪ, ಹೊಸ ದೃಷ್ಟಿ ಹೊಸ ಕಲ್ಪನೆ, ಹೊಸ ಆದರ್ಶ, ಹೊಸ ಹಾದಿ ಅವಶ್ಯಕ."

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಜನರು ಸದಾ ಜಾಗೃತರಾಗಿರಬೇಕು. ವಿದ್ಯಾವಂತರಾದವರು ಪ್ರಜಾ ಅಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ರೂಪಿಸಲು ಪ್ರಯತ್ನಿಸಬೇಕು. ಜನರು ಲಂಚಕೋರತನ, ಸ್ವಜನಪಕ್ಷಪಾತ ಮುಂತಾದವುಗಳ ವಿರುದ್ಧ ಪ್ರತಿಭಟನೆಯನ್ನು ಸೂಚಿಸದೆ ಹೋದರೆ ಜಾಗೃತಿ ಆಯೋಗಗಳಾಗಲಿ,ಲೋಕಪಾಲಗಳಾಗಲಿ ಆಡಳಿತವನ್ನು ಸುಧಾರಿಸಲಾರವು, ಪ್ರಜೆಗಳು ಮೂಕರಾದರೆ ಸರ್ಕಾರ ಕಿವುಡಾಗಿರುತ್ತದೆ. ಪ್ರಜೆಗಳು ಮೂರ್ಖರಾದರೆ ಮೂರ್ಖರೇ ಮುಖಂಡರಾಗುತ್ತಾರೆ."

"ನಮ್ಮ ಪೂರ್ವಿಕರ ತ್ಯಾಗ ಬಲಿದಾನಗಳು ಇಷ್ಟು ಬೇಗನೆ ನಿರರ್ಥಕವಾಗಲಾರವು. ಅವರ ಸತ್ಯ ಸಂದತೆ, ರಾಷ್ಟ್ರಪ್ರೇಮ, ತ್ಯಾಗ ಬುದ್ಧಿ ಮುಂತಾದ ಗುಣಗಳು ನಮ್ಮಲ್ಲಿ ಇನ್ನೂ ಸ್ವಲ್ಪ ಮಟ್ಟಿಗೆ ಉಳಿದಿವೆ. ಪೂರ್ವಋಷಿಗಳ, ಸಾಧುಸಂತರ, ಮಹಾಪುರುಷರ ತಪಸ್ಸಿನಿಂದ ಪುನೀತವಾಗಿದ್ದ ಈ ರಾಷ್ಟ್ರದಲ್ಲಿ ಕ್ರೌರ್ಯ, ಹಿಂಸೆ, ದಬ್ಬಾಳಿಕೆ ಮುಂತಾದವುಗಳಿಗೆ ಆಸ್ಪದವಿರಲಾರದೆಂದು ಹಾರೈಸುತ್ತೇನೆ. ಜನರು, ಜನನಾಯಕರು ಇನ್ನಾದರೂ ವಿವೇಕದ ಮಾರ್ಗವನ್ನು ಹಿಡಿಯಬಹುದೆಂಬ ಮಹಾದಾಸೆ ನನ್ನದು "

■





ಗಾಂಧಿ ಮಾದರಿಯ ರಾಜಕಾರಣಿ:

ಕಡಿದಾಳು ಮಂಜಪ್ಪ

ಪ್ರೊ. ಹೆಚ್. ಎಸ್. ಈಶ್ವರ್

ನಾಡಿಗೆ ಸ್ವಾತಂತ್ರ್ಯ ಬಂದ ಆಸುಪಾಸಿನಲ್ಲಿ ಹುಟ್ಟಿ ಬೆಳೆದ ನನ್ನಂತವರಿಗೆ ದೇಶದ ಭವಿಷ್ಯದ ಬಗ್ಗೆ ಏನೇನೋ ಕನಸುಗಳು ಸಹಜವಾಗಿಯೇ ಇದ್ದವು. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಸಮರ್ಪಣೆ, ಅದಕ್ಕೆ ಪೂರಕವಾಗಿ ಗಾಂಧೀಜಿಯವರ ತತ್ವಗಳು ಮತ್ತು ಆದರ್ಶಗಳು ನಮ್ಮ ಕನಸುಗಳಿಗೆ ಆಧಾರವಾಗಿದ್ದವು. ಆ ಹೊತ್ತಿನಲ್ಲಿ ದೇಶವನ್ನು ಮುನ್ನಡೆಸಲು ಗಾಂಧೀಜಿಯವರ ಗರಡಿಯಲ್ಲಿ ಬೆಳೆದುಬಂದ, ಅವರ ಮೌಲ್ಯಗಳನ್ನು ತಮ್ಮದಾಗಿಸಿಕೊಂಡಿದ್ದ, ಒಂದು ದೊಡ್ಡ ನಾಯಕರ ಪಡೆ ನಮ್ಮಆಶಾಭಾವನೆಗಳಿಗೆ ಪುಷ್ಟಿ ಕೊಟ್ಟಿತ್ತು. ಸರಳತೆ ಸಮಾನತೆ, ಜಾತ್ಯತೀತತೆ, ನ್ಯಾಯ ನಿಷ್ಠುರತೆ, ಸಾಮಾಜಿಕ ಜೀವನದಲ್ಲಿ ಪರಿಶುದ್ಧತೆ ಇವೇ ಮೊದಲಾದ ಉನ್ನತ ಮೌಲ್ಯಗಳಿಗೆ ಬದ್ಧರಾಗಿದ್ದ ಆ ನಾಯಕರು ಅವುಗಳನ್ನು ನಿಷ್ಠೆಯಿಂದ ಪರಿಪಾಲಿಸಿಕೊಂಡು ಬರುತ್ತಿದ್ದರು. ಆ ಪರಂಪರೆಯಲ್ಲಿ ಬೆಳೆದು ಬಂದ ಹಲವರು ಕರ್ನಾಟಕ ರಾಜ್ಯದಲ್ಲಿ ಇದ್ದರು ಎನ್ನುವುದು ಹೆಮ್ಮೆಯ ಸಂಗತಿ. ಅಂತವರ ಪಟ್ಟಿಯಲ್ಲಿ ಕಡಿದಾಳು ಮಂಜಪ್ಪನವರು ಅಗ್ರ ಪಂಕ್ತಿಯಲ್ಲಿ ಇದ್ದಾರೆ ಎಂದರೆ ಅದು ಅತಿಶಯೋಕ್ತಿ ಆಗಲಾರದು.

ಮಲೆನಾಡಿನ ಸಾಮಾನ್ಯ ಕೃಷಿ ಕುಟುಂಬವೊಂದರಲ್ಲಿ ಜನಿಸಿ, ಆ ಕಾಲಕ್ಕೆ ಸಾಮಾನ್ಯರಿಗೆ ಸುಲಭವಾಗಿ ಎಟುಕದ ಹೆಚ್ಚಿನ ಶಿಕ್ಷಣ ಪಡೆದು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ವಕೀಲಿ ವೃತ್ತಿಯಲ್ಲಿ ಖ್ಯಾತಿ ಗಳಿಸಿ, ರಾಜ್ಯದ ಮುಖ್ಯಮಂತ್ರಿ ಪಟ್ಟಕ್ಕೆ ಏರಿದ ಕಡಿದಾಳು ಮಂಜಪ್ಪನವರ ಸಾಧನೆ ಯಾರೂ ಹೆಮ್ಮೆ ಪಡಬಹುದಾದ ಒಂದು ಯಶೋಗಾಥೆ. ಬಹುಶಃ ಅದಕ್ಕಿಂತಲೂ ಮಿಗಿಲಾದದ್ದು ಅವರ ಬದುಕಿನ ರೀತಿ, ಅವರು ಪಾಲಿಸಿಕೊಂಡು ಬಂದ ಮೌಲ್ಯಗಳು, ಅವರು ಗಳಿಸಿದ ಜನಮನ್ನಣೆ, ಮತ್ತು ಅವರು ನಮಗೆ ಬಿಟ್ಟು ಹೋದ ಆದರ್ಶಗಳು. ಕಡಿದಾಳರು ಅವರ ವೃತ್ತಿಯಲ್ಲಾಗಲಿ, ಅವರ ಅಧಿಕಾರದಲ್ಲಿಯಾಗಲೀ ಯಾವುದೇ ಕಳಂಕ ಕಾಣದ ಪರಿಶುದ್ಧತೆ ಕಾಪಾಡಿಕೊಂಡವರು. ಮೌಲ್ಯಾಧಾರಿತ ರಾಜಕೀಯ ಪರಿಕಲ್ಪನೆ, ಅದರ ನಿಜವಾದ ಅರ್ಥದಲ್ಲಿ, ಕಡಿದಾಳರಿಗೆ ಅನ್ವಯಿಸುವಂತದು.

ಕಡಿದಾಳು ಮಂಜಪ್ಪನವರ ಜೊತೆ ನನ್ನ ಒಡನಾಟ ಹೇಳಿಕೊಳ್ಳುವಷ್ಟು ದೊಡ್ಡದೇನೂ ಇರಲಿಲ್ಲ. ಅವರು ಅಧಿಕಾರದಲ್ಲಿದ್ದಾಗ ನಾನಿನ್ನೂ ಚಿಕ್ಕವನು. ಅವರ ಅಧಿಕಾರಾವಧಿಯಲ್ಲಿ ನಾನು ಅವರನ್ನು ಕಂಡದ್ದೇ ಇಲ್ಲ. 1964ರ ಸಮಯ. ಆಗ ನಾನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿದ್ದ ಬಂಧುವೊಬ್ಬರನ್ನು ಕಾಣಲು ಹೋದಾಗ ಅಲ್ಲಿಗೆ ಕಡಿದಾಳರೂ ಅವರನ್ನು ಕಾಣಲು ಬಂದಿದ್ದರು. ನನ್ನ ಪಾಲಿಗೆ ಅದೊಂದು ಬಯಸದೇ ಬಂದ ಭಾಗ್ಯ. ಯಾರೋ ಅಲ್ಲಿದ್ದವರು ನನ್ನನ್ನು ಅವರಿಗೆ ಪರಿಚಯಿಸಿದರು. ಆಗ ನಾನು ನನ್ನ ಉನ್ನತ ಶಿಕ್ಷಣಕ್ಕೆ ಅಮೇರಿಕಾಕ್ಕೆ ಹೋಗುತ್ತಿರುವ ವಿಚಾರವನ್ನೂ ತಿಳಿಸಿದರು. ಅಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಹರಿಸುವುದು, ಹಾರೈಸುವುದು ಸಹಜ ಪ್ರತಿಕ್ರಿಯೆ. ಆದರೆ ಕಡಿದಾಳರ ಪ್ರತಿಕ್ರಿಯೆ ಬೇರೆಯದೇ ಆಗಿತ್ತು. ಆ ಹೊತ್ತು ಅವರು ಹೇಳಿದ ಮಾತುಗಳು ನನ್ನ ನೆನಪಿನಲ್ಲಿ ಇನ್ನೂ ಉಳಿದುಕೊಂಡು ಬಂದಿವೆ: "ಅಮೇರಿಕಾದ ವಿಲಾಸಿ ಜೀವನಕ್ಕೆ ಮೋಹ ಹೋಗಿ ಅಲ್ಲಿಯೇ ಇದ್ದು ಬಿಡಬೇಡ. ದೇಶಕ್ಕೆ ವಾಪಾಸು ಬಂದು ನಿನ್ನ ಜನರಿಗೆ ಸೇವೆ ಸಲ್ಲಿಸುವುದು ನಿನ್ನ ಕರ್ತವ್ಯ" ಎಂದು ಎಚ್ಚರಿಸಿದರು. ಇದು ಕಡಿದಾಳರ ರೀತಿ. ಇಲ್ಲಿ ನಾನು ಕಾಣುವುದು ರಾಷ್ಟ್ರದ ಬಗೆಗೆ ಕಡಿದಾಳರ ಅನನ್ಯ ಕಾಳಜಿ; ಯುವ ಜನತೆ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎನ್ನುವ ಆಶಯ.

ವರ್ಷಗಳ ನಂತರ ನಾನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದು ಅಲ್ಲಿಯೇ ನೆಲೆಗೊಂಡಾಗ, ಕಡಿದಾಳರನ್ನು ಕಂಡು ಮಾತಾಡುವ ನಾಲ್ಕಾರು ಸಂದರ್ಭಗಳು ಒದಗಿ ಬಂದದ್ದು ನನ್ನ ಅದೃಷ್ಟ. ಪ್ರತಿ ಬಾರಿ ಅವರನ್ನು ಕಂಡಾಗಲೂ ಅವರು ಪ್ರಮುಖವಾಗಿ ರಾಜಕೀಯ, ಸಾಮಾಜಿಕ ವಿಚಾರಗಳನ್ನು ಕುರಿತೇ ಮಾತನಾಡುತ್ತಿದ್ದರು. ರಾಜಕೀಯ ಭ್ರಷ್ಟಾಚಾರ, ನೈತಿಕ ಅಧಃಪತನ, ಮಾಧ್ಯಮಗಳ ಬೇಜವಾಬ್ದಾರಿತನ, ಯುವಜನತೆಯ ಹೊಣೆಗೇಡಿತನ ಈ ವಿಚಾರಗಳಿಗೆ ಸಂಬಂಧಿಸಿದಂತೆ ಆಕ್ರೋಶ ವ್ಯಕ್ತಪಡಿಸುತ್ತಿದ್ದರು. ಅವರ ಈ ಆಕ್ರೋಶಗಳ ಹಿನ್ನೆಲೆಯಲ್ಲಿ ಅವರ ನೈತಿಕ ನೆಲಗಟ್ಟು ಬೆಂಬಲವಾಗಿತ್ತು.

ಈ ಬಗೆಯ ನೀತಿ ಪಾಠ ಹೇಳುವ ಹಕ್ಕು ಮತ್ತು ಸ್ಥೈರ್ಯ ಮಂಜಪ್ಪನಂತವರಿಗೆ ಮಾತ್ರವೇ ಸಾಧ್ಯ.

ಹಿರಿಯ ಪತ್ರಕರ್ತ ನಾಡೋಜ ಪಾಟೀಲ ಪುಟ್ಟಪ್ಪನವರ ಒಂದು ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು: "ಕಡಿದಾಳು ಮಂಜಪ್ಪನವರು ಈಗ ಜೀವಿಸಿಲ್ಲ. ಆದರೆ ಬದುಕಿದ್ದಾರೆ. ಬದುಕಿನಲ್ಲಿ ಉಳಿಯುವಂತಹ ಜೀವನವನ್ನು ಅವರು ಬದುಕಿದರು." ಪಾಟೀಲ ಪುಟ್ಟಪ್ಪನವರ ಅಭಿಪ್ರಾಯ ನೂರಕ್ಕೆ ನೂರು ಸತ್ಯ. ಕಡಿದಾಳರು ಅವರ ಬದುಕಿನ ಒಂದು ಮಾದರಿಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ಆ ಮಾದರಿಯನ್ನು ಅನುಕರಿಸಿ ಬದುಕುವುದು ನಾವು ಆ ಪುಣ್ಯಾತ್ಮರಿಗೆ ಸಲ್ಲಿಸಬಹುದಾದ ಸೂಕ್ತ ಗೌರವ.

■



ಅರಸೀಕೆರೆಯ ಕಸ್ತೂರ್ ಬಾ ಆಶ್ರಮ...



ಮಹಾತ್ಮ ಗಾಂಧೀಜಿಯವರ ಪತ್ನಿ ಕಸ್ತೂರ್ ಬಾ ಗಾಂಧಿಯವರು 1944 ರ ಫೆಬ್ರವರಿ 22 ರಂದು ಪುಣೆಯ ಆಘಾಖಾನ್ ಅರಮನೆಯಲ್ಲಿ ಸೆರೆವಾಸದಲ್ಲಿ ಇದ್ದಾಗಲೇ ನಿಧನರಾದರು . ಅವರ ನೆನಪಿಗಾಗಿ ಮಹಾತ್ಮ ಗಾಂಧಿಯವರು ಕಸ್ತೂರ್ ಬಾ ಹೆಸರಿನಲ್ಲಿ ಸಮಾಜ ಸೇವೆಗಾಗಿ ಒಂದು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನ್ನು ಸ್ಥಾಪಿಸಿದರು. ಇದರ ಶಾಖೆಗಳು ಭಾರತದಾದ್ಯಂತ 22 ರಾಜ್ಯಗಳಲ್ಲಿವೆ . ಕರ್ನಾಟಕದಲ್ಲಿ ಇದರ ಶಾಖೆ ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿದೆ. ಈ ಕೇಂದ್ರಕ್ಕೆ ಸುಮಾರು 80 ಎಕರೆ ಜಮೀನನ್ನು ಸರ್ಕಾರವು ಕೊಡುಗೆಯಾಗಿ ನೀಡಿದೆ. ಚಿಕ್ಕ ಮಗಳೂರು ಜಿಲ್ಲೆಯ ಮೂಡಿಗೆರೆ ಬಳಿಯ ಭಾರತಿ ಬೈಲ್‌ನಲ್ಲಿ , ಮಂಡ್ಯ ಜಿಲ್ಲೆಯ ಮಾನ್ಲೋರ್ಮಿ ದೊಡ್ಡಿಯಲ್ಲಿ ಕೂಡಾ ಇದರ ಉಪಶಾಖೆಗಳಿವೆ .

ಚಿಕ್ಕ ಬಳ್ಳಾಪುರ ಜಿಲ್ಲೆಯ ವಿದುರಾಶ್ವಥ , ರಾಯಚೂರು ಬಳಿ ಕೂಡಾ ಇದರ ಆಸ್ತಿಗಳಿವೆ . ಆದರೆ ನಿರ್ವಹಣೆಯ ಕೊರತೆಯಿಂದಾಗಿ ಈ ಎರಡೂ ಕಡೆಯಲ್ಲಿ ಚಟುವಟಿಕೆಗಳು ನಡೆಯುತ್ತಿಲ್ಲ.

ಮಹಾರಾಷ್ಟ್ರದ ವಾರ್ದಾ ಆಶ್ರಮದಲ್ಲಿ ಮಹಾತ್ಮ ಗಾಂಧೀಜಿಯವರಿಂದ ನೇರವಾಗಿ ತರಬೇತಿ ಪಡೆದು ಬಂದ ಶ್ರೀಮತಿ ಯಶೋಧರ ದಾಸಪ್ಪ ನವರು ಅರಸೀಕೆರೆಯಲ್ಲಿ ಕಸ್ತೂರ್ ಬಾ ಟ್ರಸ್ಟ್ ನ ಕರ್ನಾಟಕ ಶಾಖೆಯನ್ನು ಸ್ಥಾಪಿಸಿದರು . ಮಹಾತ್ಮ ಗಾಂಧೀಜಿಯವರ ಚಿತಾ ಭಸ್ಮವನ್ನು ತಂದು

ಅರಸೀಕೆರೆಯ ಕಸ್ತೂರ್ ಬಾ ಆಶ್ರಮದ ಆವರಣದಲ್ಲಿಟ್ಟು ಅದನ್ನು ಒಂದು ಸ್ಮರಣೀಯ ಸ್ತಳವನ್ನಾಗಿಸಿದರು . ಕರ್ನಾಟಕದ ಕಸ್ತೂರ್ ಬಾ ಎಂದೇ ಹೆಸರಾಗಿದ್ದ ಅವರು ತಮ್ಮ ಜೀವಿತಾವಧಿಯಲ್ಲಿ ಈ ಆಶ್ರಮವನ್ನು ಉಚ್ಛ್ರಾಯ ಸ್ಥಿತಿಗೆ ತಂದು ಆಶ್ರಮದಲ್ಲಿಯೇ ನಿಧನರಾದರು . ಅವರ ಸಮಾಧಿ ಸ್ಥಳದ ಗುರುತಿಗಾಗಿ ಯಶೋದರಮ್ಮನವರ ಪುತ್ಥಳಿಯನ್ನು ಇಲ್ಲಿ ಸ್ಥಾಪಿಸಲಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ಲಾರ್ಸನ್ ಅಂಡ್ ಟ್ಯೂಬ್ರೋ ಕಂಪನಿಯ ಸಾಮಾಜಿಕ ಹೊಣೆಗಾರಿಕೆ ನಿಧಿಯ ಸಹಕಾರದಿಂದ ಇಲ್ಲಿ ಅನಾಥ ಹೆಣ್ಣು ಮಕ್ಕಳ ವಸತಿ ನಿಲಯಕ್ಕೆ ಹೊಸ ಕಟ್ಟಡವನ್ನು ಕಟ್ಟಲು ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ಆರಂಭಿಕ ಕೊಡುಗೆಯಾಗಿ ಈ ಕಂಪನಿಯವರು 25 ಲಕ್ಷ ರೂಗಳ ಕೊಡುಗೆ ನೀಡಿದರು . ಹೆಚ್ಚುವರಿಯಾದ 15 ಲಕ್ಷ ರೂಗಳನ್ನು ಕಸ್ತೂರ್ ಬಾ ಆಶ್ರಮದಿಂದ ಭರಿಸಿ ನೂತನ ವಸತಿ ನಿಲಯವನ್ನು ನಿರ್ಮಿಸಲಾಗಿದೆ .



ಕಸ್ತೂರ್ ಬಾ ಗಾಂಧಿ ಅವರ ಪುಣ್ಯ ಸ್ಮರಣೆಯ ದಿನವಾದ ಮಾತೃ ದಿವಸದ ಆಚರಣೆ ಅರಸೀಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ ನಡೆಯಿತು. ಉಪ ಪ್ರತಿನಿಧಿ ಮೇರಿಯವರು ಎಲ್ಲರನ್ನೂ ಸ್ವಾಗತಿಸಿದರು.



ಕಸ್ತೂರ್ ಬಾ ಆಶ್ರಮದಲ್ಲಿರುವ ಅನಾಥ ಹೆಣ್ಣು ಮಕ್ಕಳಿಗಾಗಿ ಹೊಸದಾಗಿ ನಿರ್ಮಿಸಿರುವ ವಸತಿ ನಿಲಯ ಕಟ್ಟಡವನ್ನು ಅರಸೀಕೆರೆ ವಿಧಾನ ಸಭಾ ಶಾಸಕರಾದ ಕೆ ಎಂ ಶಿವಲಿಂಗೇ ಗೌಡರು ಉದ್ಘಾಟಿಸಿದರು .



ಕಸ್ತೂರ್ ಬಾ ಗಾಂಧಿಯವರ ಬಗ್ಗೆ ಉಪನ್ಯಾಸ ನೀಡಿದ ಪ್ರೊ. ವಿನುತಾ ಅವರಿಗೆ ಪ್ರತಿನಿಧಿ ಸರಸ್ವತಿ ಹೊಸಮನಿ ಅವರಿಂದ ಸನ್ಮಾನ.. ಅರಸೀಕೆರೆಯ ಕಸ್ತೂರ್ ಬಾ ಆಶ್ರಮದ ಹಿಂದಿನ ಪ್ರತಿನಿಧಿ ಉಷಾ ಅಬ್ರಾಲ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



ವಿಶಿಷ್ಟವಾದ ವರ್ಲಿ ಕಲೆಯಲ್ಲಿ ಗಾಂಧಿ ಚಿತ್ರಗಳು ..



ಸಮಾಜ ಸೇವೆಯಲ್ಲಿ

'ಸಮರ್ಪಣಾ' ಸಂಸ್ಥೆ

ಸಮಾಜಕ್ಕೆ ಏನಾದರೂ ಮಾಡಬೇಕು ಎಂದು ಹೊರಟಾಗ ನಾವು ಇಡುವ ಚಿಕ್ಕ ಹೆಜ್ಜೆಯೂ ಕೂಡ ದೊಡ್ಡ ಪ್ರಭಾವವನ್ನು ಬೀರುತ್ತದೆ ಎಂಬುದು ಸಮರ್ಪಣಾ ತಂಡದ ನಂಬಿಕೆ ಮತ್ತು ಶಕ್ತಿಯಾಗಿದೆ.

ಬಹುದಿನಗಳ ಕನಸನ್ನ ನನಸು ಮಾಡುವ ತುಡಿತದಲ್ಲಿ ಸಮರ್ಪಣಾ ಹೊರಟಿದ್ದು ನಮ್ಮ ದೇಶದ ರಾಜಧಾನಿ ನವದೆಹಲಿಯತ್ತ ; ಹೌದು ಈ ಪಯಣ ಸುಧೀರ್ಘವಾಗಿದ್ದು, ನಮ್ಮೆಲ್ಲರ ಕನಸಿಗೆ ರೆಕ್ಕೆ ಕಟ್ಟಿ ಬಹುದೂರ ಹಾರಲು ಸಾಧ್ಯವಾಗಿದ್ದು ಈ ಪಯಣದಿಂದಲೇ.

ನಮ್ಮ ಕನಸಿನ ಕನ್ನಡಕ್ಕಾಗಿ ಎಂಬ ಸಾಲುಗಳೊಂದಿಗೆ ಶುರುವಾದ ಸಮರ್ಪಣಾ ಈಗ ರಾಜ್ಯದ ಗಡಿಯನ್ನೂ ಮೀರಿ ತನ್ನ ಛಾಪನ್ನು ರಾಷ್ಟ್ರ ಮಟ್ಟದಲ್ಲಿ ಮೂಡಿಸುತ್ತಿದೆ ಎಂಬ ಹೆಮ್ಮೆ ನಮಗೆ. ಸಮರ್ಪಣಾ ತಂಡ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಾ ಪ್ರಮುಖವಾಗಿ ಕಣ್ಣು ಕಾಣದ ಅಂಧರಿಗೆ ಮತ್ತು ವಿಶೇಷ ಚೇತನರಿಗಾಗಿ ಶ್ರಮಿಸುತ್ತಾ ಪರಿಸರ ಸಂರಕ್ಷಣೆಗಾಗಿ ಗಿಡಗಳನ್ನು ನೆಟ್ಟು ಬೆಳೆಸುತ್ತಿದೆ. ಕರ್ನಾಟಕದ ಸರ್ಕಾರಿ ಶಾಲೆಗಳಿಗೆ ಹೊಸ ರೂಪ ಕೊಟ್ಟು ಅಲ್ಲಿನ ಮಕ್ಕಳಿಗೆ ವಿಶೇಷ ಪಠ್ಯೇತರ ಚಟುವಟಿಕೆಗಳನ್ನು ಏರ್ಪಡಿಸಿ ಮಕ್ಕಳಲ್ಲಿ ಒಳ್ಳೆಯ ವ್ಯಕ್ತಿತ್ವ, ಸಮಾಜಮುಖಿಯಾಗಿ ಬದಲಾಯಿಸುವ ನಿಟ್ಟಿನಲ್ಲಿಯೂ ಕಾರ್ಯ ಮಾಡುತ್ತಾ ಇದ್ದೇವೆ .



ದೆಹಲಿ ರಾಷ್ಟ್ರೀಯ ಗಾಂಧಿ ಮ್ಯೂಸಿಯಂ ನ ಹೊರ ಆವರಣಕ್ಕೆ ಹೊಸ ರೂಪ ನೀಡಿದ ಸಂತೃಪ್ತಿ..
ಅಣ್ಣಾಮಲೈ ಅವರೊಡನೆ ಮ್ಯೂಸಿಯಂನ ಸಿಬ್ಬಂದಿ ಮತ್ತು ಸಮರ್ಪಣಾ ತಂಡ ..

ಈ ನಮ್ಮ ಕಾರ್ಯವೈಖರಿ ಕಂಡು ಗಾಂಧಿವಾದಿ ಪ್ರೊ ಜಿ ಬಿ ಶಿವರಾಜು ರವರು ಅರಸೀಕೆರೆಯ ಕಸ್ತೂರಬಾ ಗಾಂಧಿ ಆಶ್ರಮದ ಆವರಣದಲ್ಲಿದ್ದ ಎಲ್ಲಾ ಗಾಂಧಿ ಪ್ರತಿಮೆಗಳಿಗೆ ಹೊಸ ಆಯಾಮ ನೀಡಲು ಅವಕಾಶ ಮಾಡಿಕೊಟ್ಟಾಗ ನಿಜಕ್ಕೂ ಆಶ್ಚರ್ಯವಾಯಿತು. ನಮ್ಮ ತಂಡ ಅರಸೀಕೆರೆ ಕಸ್ತೂರಬಾ ಗಾಂಧಿ ಆಶ್ರಮದ ಎಲ್ಲಾ ಪ್ರತಿಮೆಗಳಿಗೆ ಹೊಸ ರೂಪ ಕೊಟ್ಟು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು . ನಂತರ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಹಾಗೂ ಕಾರ್ಯಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್ ಅವರುಗಳ



ವರ್ಲಿ ಕಲೆಯ ಚೌಕಟ್ಟಿನಲ್ಲಿ ಚಿತ್ರ ರಚನೆ

ನಮ್ಮ ಕನಸಿನ ಕನ್ನಡಕ್ಕಾಗಿ ಸಂಕಲ್ಪ ಎಂಬ ಧ್ಯೇಯವನ್ನು ಇಟ್ಟುಕೊಂಡು ಕರ್ನಾಟಕವನ್ನು ಬಿಟ್ಟು ದೆಹಲಿಯ ಗಾಂಧಿ ಮ್ಯೂಸಿಮ್ ಗೆ ಬಣ್ಣ ಹಚ್ಚಿ ಹೊಸ ರೂಪ ನೀಡುವ ಕಾರ್ಯಕ್ರಮದಲ್ಲಿ ನಾನೂ ಇದ್ದೆ ಎಂಬ ಖುಷಿಯಿದೆ. ಗಾಂಧಿ ಮ್ಯೂಸಿಯಂನ ಸಿಬ್ಬಂದಿ, ಹಾಗೂ ಅಣ್ಣಾ ಮಲೈ ಅವರು ನೀಡಿದ ಪ್ರೀತಿಗೆ ನಾವು ಮಾರು ಹೋಗಿದ್ದೇವೆ. ಅಣ್ಣಾ ಮಲೈ ಅವರ ಸರಳತೆಯನ್ನು ನೋಡಿ ನಾವು ಕಲಿತಿದ್ದೇವೆ.

ಗಾಂಧಿಯವರ ಜೀವನದ ಪ್ರಮುಖ ಘಟನೆಗಳನ್ನು ಉದಾಹರಣೆಯನ್ನಾಗಿ ನೀಡಿ ನಮ್ಮ ಜೀವನಕ್ಕೆ ಬೇಕಾದ ವಿಷಯಗಳನ್ನು ಅವರು ಹೇಳಿಕೊಟ್ಟಿದ್ದಾರೆ. ಭಾಷೆಯೇ ಗೊತ್ತಿಲ್ಲದ ಜಾಗಕ್ಕೆ ನಮ್ಮ ಸಮರ್ಪಣ ತಂಡ ಹೋಗಿ ಬಣ್ಣ ಹಚ್ಚುವ ಕಾರ್ಯ ವನ್ನು ಯಶಸ್ವಿಗೊಳಿಸಿ ಬಂದಿದೆ.

– ಶಿವಕುಮಾರ್ ಎಚ್ ಎನ್

ಆಶಯದಂತೆ ಪ್ರೊಫೆಸರ್ ಜಿ ಬಿ ಶಿವರಾಜು ರವರ ಮಾರ್ಗದರ್ಶನದಲ್ಲಿ ಬೆಂಗಳೂರಿನ ಗಾಂಧಿ ಭವನದ ಎಲ್ಲಾ ಗಾಂಧಿ ಪ್ರತಿಮೆಗಳಿಗೆ ಹೊಸ ರೂಪ ಕೊಡಲಾಯಿತು .ಈ ಕಾರ್ಯವನ್ನು ದೆಹಲಿ ಗಾಂಧಿ ನ್ಯಾಷನಲ್ ಮ್ಯೂಸಿಯಂನ ನಿರ್ದೇಶಕರಾದ ಅಣ್ಣಾಮಲೈ ರವರು ನೋಡಿ ಖುಷಿ ಪಟ್ಟು ದೆಹಲಿಯ ಗಾಂಧಿ ನ್ಯಾಷನಲ್ ಮ್ಯೂಸಿಯಂ ಗೋಡೆಗಳಿಗೆ ಗಾಂಧಿ ಜೀವನ ಆಧಾರಿತ ಚಿತ್ರಗಳನ್ನು ಮೂಡಿಸಲು ಆಹ್ವಾನಿಸಿದರು .

ಜೀವನವು ತಿರುಗಾಟದಲ್ಲಿ ಮುಳುಗಿರುತ್ತದೆ. ಅಂತಹ ಒಂದು ಅದ್ಭುತ ಅನುಭವ ದೆಹಲಿಯ ಪ್ರವಾಸ.. ಓದಿದ್ದಕ್ಕಿಂತ ಹಿರಿಯರ ಸರಳತೆ ನೋಡಿ ಕಲಿತದ್ದೆ ಹೆಚ್ಚು.. ಗಾಂಧಿ ಮ್ಯೂಸಿಯಮ್ ಗೋಡೆಗಳಿಗೆ ಹೊಸ ರೂಪ ಕೊಡುವ ಕಾರ್ಯ ಒಂದೆಡಡೆಯಾದರೆ.... ಅಲ್ಲಿನ ಉನ್ನತ ವ್ಯಕ್ತಿಗಳಿಯಿಂದ ಕಲಿತ ಜೀವನ ಪಾಠ ಎಲ್ಲಿಯೂ ಸಿಗದ ಕಲಿಕೆಗಳು..

– ಕೀರ್ತನ ಚನ್ನರಾಯಪಟ್ಟಣ



ಹೊಸ ರೂಪದಲ್ಲಿ ದೆಹಲಿಯ ರಾಷ್ಟ್ರೀಯ ಗಾಂಧಿ ಮ್ಯೂಸಿಯಂ ನ ಪ್ರವೇಶ ದ್ವಾರ .



ಚಿತ್ರ ಒಂದೇ ... ಕುಂಚ ಹಿಡಿದ ಕೈಗಳು ಹಲವು .

ಆಹ್ವಾನದಂತೆ ಸಮರ್ಪಣಾ ತಂಡದ ಹತ್ತು ಸ್ವಯಂಸೇವಕರೊಂದಿಗೆ ದಿನಾಂಕ 14–02–2025 ರಿಂದ 20–02–2025 ವರೆಗೆ ದೆಹಲಿಯ ನ್ಯಾಷನಲ್ ಗಾಂಧಿ ಮ್ಯೂಸಿಯಂ ನಲ್ಲಿ ನಾವು ಕಾರ್ಯನಿರತರಾದೆವು. ಸ್ವಾಭಾವಿಕವಾಗಿ ಯಾವುದೇ ಕೆಲಸಗಳನ್ನು ಶುರು ಮಾಡುವ ಮುನ್ನ ಒಂದಿಷ್ಟು ಪೂರ್ವ ತಯಾರಿ, ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳುವುದು ಒಳಿತು . ನಮ್ಮ ತಂಡವು ಕೂಡ ಒಂದಷ್ಟು ಕಾರ್ಯರೂಪಿಸಿಕೊಂಡಿದ್ದರೂ ದೆಹಲಿಯ ಮೈಕೊರೆಯುವ ಚಳಿಯ ವಾತಾವರಣ ನಮಗೆ ಸವಾಲಾಗಿತ್ತು . ಏಳು ದಿನಗಳ ಕಾಲ ನಮ್ಮ ತಂಡ ಹಗಲು ರಾತ್ರಿ ಎನ್ನದೆ ಎಲ್ಲರ ಸಹಕಾರದೊಂದಿಗೆ ಗಾಂಧಿ ನ್ಯಾಷನಲ್ ಮ್ಯೂಸಿಯಂ ಗೋಡೆಗಳಿಗೆ ಗಾಂಧಿ ಆಧಾರಿತ ಭಿತ್ತಿ ಚಿತ್ರಗಳನ್ನು ಬಿಡಿಸಲು ಆರಂಬಿಸಿತು. ಗೋಡೆಗಳ ಕೆಲವು ಭಾಗಗಳನ್ನು ದುರಸ್ತಿ ಮಾಡಿ ಸ್ವಚ್ಛಗೊಳಿಸಿ ಕೆಲಸ ಶುರು ಮಾಡಲು ತಡವಾದರೂ, ನಂತರದ ದಿನಗಳಲ್ಲಿ ನಮ್ಮ ಕೆಲಸ ಚುರುಕುಗೊಂಡಿತು. ಪ್ರತಿ ರಾತ್ರಿ ಒಂದು ಅಥವಾ ಎರಡು ಗಂಟೆ ನಡುರಾತ್ರಿಯವರೆಗೆ ಕೆಲಸ ಮಾಡುತ್ತಿದ್ದು ಎಲ್ಲರಿಗೂ ವಿಸ್ಮಯವಾಗಿತ್ತು. ಗಾಂಧೀಜಿ ಜೀವನಾಧಾರಿತ ಪ್ರಮುಖ ಹನ್ನೆರಡು ಛಾಯಾಚಿತ್ರಗಳನ್ನು ಗೋಡೆಗಳ ಮೇಲೆ ಬಿಡಿಸಿದೆವು. ಭಾರತದ ವಿಶಿಷ್ಟಕಲೆಯಾದ ವರ್ಲಿ ಆರ್ಟ್ ನಲ್ಲಿ ಗಾಂಧಿ ಜೀವನದಾರಿತ ಕೆಲವು ಚಿತ್ರಗಳು ಮೂಡಿ ಬಂದಿದ್ದು ವಿಶೇಷವಾಗಿತ್ತು.

ಚಿತ್ರಗಳ ಆಯ್ಕೆ ಯಾವ ರೀತಿ ಇರಬೇಕು ಎನ್ನುವ ಸಂಪೂರ್ಣ ಸ್ವತಂತ್ರವನ್ನು ಗಾಂಧಿ ಸ್ಮಾರಕ ಮ್ಯೂಸಿಯಂ ನವರು ನಮಗೆ ನೀಡಿದ್ದು ನಮ್ಮ ಮೇಲೆ ಅವರಿಟ್ಟಿರುವ ನಂಬಿಕೆಯ ಪ್ರತಿರೂಪವಾಯಿತು. ಸೆಕ್ಯೂರಿಟಿ ಗಾರ್ಡ್ ಗಳಿಂದ ಹಿಡಿದು ಪ್ರತಿಯೊಬ್ಬರು ನಮ್ಮ ಮೇಲೆ ತೋರಿಸುತ್ತಿದ್ದ ಪ್ರೀತಿ ಕಾಳಜಿ ನಿಜಕ್ಕೂ ಆಶ್ಚರ್ಯ ಚಕಿತವಾಯಿತು . ತಡರಾತ್ರಿವರೆಗೂ ನಾವು ಕೆಲಸ ಮಾಡುತ್ತಿದ್ದರೂ ಅವರು ಬೇಸರವಿಲ್ಲದೆ ನಮ್ಮನ್ನು ಉಪಚರಿಸುತ್ತಾ ತಡರಾತ್ರಿಯಲ್ಲೂ ನಮಗೆ ಚಹಾ ಉಪಹಾರಗಳನ್ನು ತಲುಪಿಸುತ್ತಿದ್ದರು. ಎಷ್ಟೋ ದಾರಿಹೋಕರು ಹಾಗೂ ಸ್ಥಳೀಯರು ನಾವು ಬಿಡಿಸುತ್ತಿದ್ದ ಗಾಂಧಿ ಚಿತ್ರಗಳನ್ನು ನೋಡಿ ಮೂಕ

ಗಾಂಧಿ ಮ್ಯೂಸಿಯಂ ನ್ನು ಇನ್ನಷ್ಟು ಸುಂದರೀಕರಿಸಲು ಅವಕಾಶ ದೊರೆತಿದ್ದು ನಮ್ಮ ಭಾಗ್ಯ. ನಮ್ಮ ತಂಡವನ್ನು ಗುರುತಿಸಿ ಮತ್ತಷ್ಟು ಸೇವೆಯನ್ನು ಮಾಡಲು ಅವಕಾಶ ಮಾಡಿ ಕೊಟ್ಟ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ದೆಹಲಿಯ ಗಾಂಧಿ ನ್ಯಾಷನಲ್ ಮ್ಯೂಸಿಯಂ ಅವರಿಗೆ ಕೃತಜ್ಞತೆಗಳು. ಗಾಂಧಿ ಸ್ಮಾರಕ ಮ್ಯೂಸಿಯಂನ ನಿರ್ದೇಶಕರಾದ ಅಣ್ಣಾಮಲೈ, ಸಿಬ್ಬಂದಿಗಳಾದ ರಾವತ್, ದೀಪಾಲಿ ಅವರಿಗೂ ಧನ್ಯವಾದಗಳು .

– ರಂಜಿತಾ ಮಧುಗಿರಿ



ದಕ್ಷಿಣ ಆಫ್ರಿಕಾದಲ್ಲಿ ಬ್ಯಾರಿಸ್ಟರ್ ಆಗಿ ವಕೀಲಿಕೆ ನಡೆಸುತ್ತಿದ್ದ ಗಾಂಧಿ ..

ವಿಸ್ಮಿತರಾಗುತ್ತಿದ್ದರು. ನಮ್ಮ ಹರುಕು ಮುರುಕು ಹಿಂದಿ ಭಾಷೆಯಲ್ಲಿ ನಾವು ಅವರಿಗೆ ನಮ್ಮ ಕಾರ್ಯದ ಬಗ್ಗೆ ಹೇಳುತ್ತಿದ್ದೆವು . ನಮ್ಮ ಈ ಸೇವಾ ಕಾರ್ಯ

ಗೋಡೆಗಳಿಗಷ್ಟೇ ಅಲ್ಲ ಅಲ್ಲಿರುವ ಮನಸ್ಸುಗಳಿಗೂ ಕೂಡ ಒಂದು ಚೌಕಟ್ಟಾದ ರೂಪವನ್ನು ನೀಡಿತೆಂದು ಹೇಳಬಹುದು.


ಮೊದಮೊದಲು ನಮ್ಮನ್ನ ನೋಡಿ ಇವರೆಲ್ಲ ಇನ್ನೂ ಹದಿ ಹರೆಯದ ಯುವಕರು ; ಇವರು ನಮ್ಮ ಕಟ್ಟಡಕ್ಕೆ ಏನು ಹೊಸ ರೂಪ ಕೊಡ್ತಾರೆ ಅಂತ ಆಶ್ಚರ್ಯ ವ್ಯಕ್ತ ಪಡಿಸುತ್ತಿದ್ದವರು ಕೊನೆಯಲ್ಲಿ ನಮ್ಮ ಕೆಲಸ ನೋಡಿ ಮೆಚ್ಚುಗೆ ವ್ಯಕ್ತಪಡಿಸಿ ಬಾಯಿ ಮೇಲೆ ಬೆರಳಿಟ್ಟು ಕೊಂಡರು . ಏನಾದರೂ ಬದಲಾವಣೆ ತರಬೇಕು ಅಂತ ಬಯಸಿದರೆ ಅದಕ್ಕೆ ವಯಸ್ಸು , ಅಂತಸ್ತು ಇದ್ಯಾವುದೂ ಪರಿಗಣನೆಗೆ ಬರುವುದಿಲ್ಲ . ಸೇವೆ ಮಾಡುವ ಮನಸ್ಸೊಂದಿದ್ದರೆ ಅಷ್ಟೇ ಸಾಕು ಒಂದು ಹೊಸ ಪ್ರಪಂಚವನ್ನ ಸೃಷ್ಟಿಸಬಹುದು.

ನಿಸ್ವಾರ್ಥ ಸೇವೆ, ಪ್ರಾಮಾಣಿಕತೆ, ಸರಳ ವ್ಯಕ್ತಿತ್ವ ಎಂಥವರನ್ನೂ ಕೂಡ ತನ್ನತ್ತ ಸೆಳೆದುಕೊಂಡು ಬಿಡುತ್ತದೆ ಎನ್ನುವುದಕ್ಕೆ ಸಾಕ್ಷಿಯಾದವರು ನಮ್ಮ ಅಣ್ಣಾಮಲೈ ಸರ್ .. ಅಷ್ಟು ದೊಡ್ಡ ಹುದ್ದೆಯಲ್ಲಿದ್ದರೂ ಕೂಡ ನಮ್ಮನ್ನು ಅವರು ಉಪಚರಿಸಿದ ರೀತಿ ಸೋಜಿಗವಾಗಿದೆ. ನಮ್ಮ ಬೇಕು ಬೇಡಗಳನ್ನು ನೋಡುವುದರ ಜೊತೆ ಅವರಲ್ಲಿ ನಮ್ಮನ್ನೂ ಒಬ್ಬರನ್ನಾಗಿಸಿಕೊಂಡಿದ್ದು ನಿಜಕ್ಕೂ ಖುಷಿ ಸಂಗತಿ . ಈ ರೀತಿಯ ಸಹಕಾರವೇ ನಮ್ಮಲ್ಲಿ ಹೆಚ್ಚು ಕೆಲಸ ಮಾಡಲು ಪ್ರೇರೇಪಿಸಿದ್ದು . ಅವರು ಪ್ರತಿದಿನ ಗಾಂಧಿಯವರ ಜೀವನದ ವಿಷಯಗಳನ್ನು ತಿಳಿಸುವುದರ ಮೂಲಕ ನಮಗೆ ಬಹಳ ಆಪ್ತರಾದರು. ಇದರಿಂದ ಅವರ ಜೊತೆ ಮತ್ತಷ್ಟು ಸಮಯ ಕಳೆಯಲು ನಮಗೆ ಅವಕಾಶ ಸಿಕ್ಕಿತು.

ನಮ್ಮ ತಂಡದಲ್ಲಿ ಸೌಜನ್ಯ ವಿಜಯಪುರ, ಕೀರ್ತನ ಚನ್ನರಾಯಪಟ್ಟಣ, ಶಿವಕುಮಾರ್ ಮಂಡ್ಯ, ಅಶ್ವಥ್ ಪಿರಿಯಾಪಟ್ಟಣ, ರಂಜಿತಾ ಮಧುಗಿರಿ, ಅನ್ವಿತಾ ಸಾಗರ, ಹರ್ಷಿತ ಮೈಸೂರು, ಬಸವ ಕೆಸ್ತೂರು, ಸಂಜೀವ್ ವಿಜಯಪುರ, ಮತ್ತು ಸಚಿನ್ ರಾಜು ಮಂಡ್ಯ ಹಾಗೂ ಸಮರ್ಪಣಾ ತಂಡದ ಎಲ್ಲಾ ಸದಸ್ಯರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಮ್ಮ ಈ ಅಮೋಘ ಕೆಲಸಕ್ಕೆ ಬೆಂಬಲ ನೀಡುತ್ತಾ ಪ್ರೋತ್ಸಾಹಿಸಿದ್ದನ್ನು ನಾವು ಮರೆಯುವಂತಿಲ್ಲ.

■

ಗಾಂಧಿ ಏಕೆ ರಾಷ್ಟ್ರಪಿತ?



– ಅರವಿಂದ ಚೊಕ್ಕಾಡಿ

ಗಾಂಧೀಜಿ ರಾಷ್ಟ್ರಪಿತ ಅಲ್ಲ" ಅಥವಾ,"ಗಾಂಧೀಜಿಯವರನ್ನು ರಾಷ್ಟ್ರಪಿತ ಎಂದು ಒಪ್ಪಲು ಸಾಧ್ಯವಿಲ್ಲ", "ಗಾಂಧೀಜಿ ಮಹಾತ್ಮ ಅಲ್ಲ" ಎನ್ನುವ ಮಾತುಗಳು ಆಗಾಗ ಕೇಳಿಸುತ್ತಾ ಇರುತ್ತವೆ. ಈ ಪ್ರತಿಪಾದನೆಯಲ್ಲಿ ಹಲವು ಮಠಾಧಿಪತಿಗಳು ಬಹಳ ಮುತುವರ್ಜಿಯನ್ನೂ ತೆಗೆದುಕೊಂಡಿದ್ದಾರೆ. ಇತ್ತೀಚೆಗೆ ಉಡುಪಿ ಮಠದಲ್ಲಿ ನಾಲ್ವರು ಯತಿಗಳು ಗಾಂಧಿ ನಿಂದನೆಯ ಧಾರ್ಮಿಕ ಜವಾಬ್ದಾರಿಯ ನಿರ್ವಹಣೆಯಲ್ಲಿ ಶ್ರದ್ಧೆಯಿಂದ ಪಾಲ್ಗೊಂಡಿರುವ ಬಗ್ಗೆ ಪ್ರಜಾವಾಣಿಯಲ್ಲಿ ವರದಿಯಾಗಿದೆ. ಗಾಂಧಿ ಹತ್ಯೆಯಾದಾಗ ಪೇಜಾವರ ಮಠದ ಅಂದಿನ ಸ್ವಾಮೀಜಿ ದುಃಖಿಸಿದ ಘಟನೆ, ಶೃಂಗೇರಿಯ ಅಂದಿನ ಜಗದ್ಗುರುಗಳು ತುಂಗೆಯಲ್ಲಿ ಮುಳುಗೆದ್ದ ಘಟನೆಗಳೆಲ್ಲ ನಡೆದಿದ್ದವು. ಇಂದಿನ ಸ್ವಾಮೀಜಿಗಳಿಗೆ ಅದೆಲ್ಲ ಅರ್ಥಹೀನವೆಂದು ಅನಿಸಿರಬಹುದು. ಪ್ರತಿಪಾದನೆ ಅವರವರ ಸ್ವಾತಂತ್ರ್ಯ. ಆದರೆ ಗಾಂಧೀಜಿ ಯಾಕೆ ರಾಷ್ಟ್ರಪಿತ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗುತ್ತದೆ.

ರಾಷ್ಟ್ರಪಿತ ಎನ್ನುವುದು ಒಂದು ರಾಷ್ಟ್ರ ಅಥವಾ ದೇಶ ಅಥವಾ ಆಡಳಿತಾತ್ಮಕ ವ್ಯವಸ್ಥೆಯನ್ನು ಸಂಘಟಿಸುವಲ್ಲಿ ಅಥವಾ ಸ್ವತಂತ್ರಗೊಳಿಸುವುದರಲ್ಲಿ ಅಥವಾ ಅಭಿವೃದ್ಧಿ ಸಾಧಿಸುವುದರಲ್ಲಿ ಪ್ರಮುಖ ಚಾಲಕ ಶಕ್ತಿಯಾಗಿದ್ದ ವ್ಯಕ್ತಿಗೆ ನೀಡುವ ಗೌರವ ಸೂಚಕ ಬಿರುದಾಗಿದೆ. ಪುರಾತನ ರೋಮ್ ಸಾಮ್ರಾಜ್ಯದಲ್ಲಿ ಈ ಪದ್ಧತಿ ಇತ್ತು. ರೋಮ್‌ನ ಸೆನೆಟ್ ವೀರರಿಗೆ, ನಂತರದ ದಿನಗಳಲ್ಲಿ ಚಕ್ರವರ್ತಿಗಳಿಗೆ 'ಪ್ಯಾಟರ್ ಪ್ಯಾಟ್ರಿಯಾ' ಅಂದರೆ 'ತಂದೆ ನಾಡಿನ ರಾಷ್ಟ್ರಪಿತ' ಎಂಬ ಬಿರುದು ನೀಡುವ ಪದ್ಧತಿ ಇತ್ತು. ನಂತರದ ಕಾಲದಲ್ಲಿ ದೇಶವನ್ನು ತಾಯ್ನಾಡು ಎಂದು ಭಾವಿಸುವ ರಾಷ್ಟ್ರಗಳಲ್ಲೂ 'ರಾಷ್ಟ್ರಪಿತ' ದ ಪರಿಕಲ್ಪನೆ ಅನುಷ್ಠಾನಕ್ಕೆ ಬಂದಿತ್ತು.

1603 ರಿಂದ 1625 ರ ಅವಧಿಯಲ್ಲಿ ಬ್ರಿಟನ್‌ನ ಚಕ್ರವರ್ತಿ 1 ನೆಯ ಜೇಮ್ಸ್ 'ರಾಜನ ದೈವೀಕ ಹಕ್ಕುಗಳ ಸಿದ್ಧಾಂತ' ವನ್ನು ಪ್ರತಿಪಾದಿಸಿದ್ದ. ರಾಜನು ದೇವರಿಂದ ಅಧಿಕಾರವನ್ನು ಪಡೆದಿದ್ದು ದೇವರ ಪ್ರತಿನಿಧಿಯಾಗಿದ್ದಾನೆ;ಆದ್ದರಿಂದ ರಾಜನು ದೇವರಿಗೆ ಮಾತ್ರ ಉತ್ತರದಾಯಿಯಾಗಿರುತ್ತಾನೆ ಎನ್ನುವುದು ಈ ಸಿದ್ಧಾಂತದ ತಿರುಳು. ಈ ಸಿದ್ಧಾಂತದ ಪ್ರಕಾರ ರಾಜನು ತಾನೇ ತಾನಾಗಿ ರಾಷ್ಟ್ರಪಿತನಾಗುತ್ತಾನೆ. ಭಾರತದಲ್ಲಿ 1266 ರಲ್ಲಿ ಅಧಿಕಾರಕ್ಕೆ ಬಂದಿದ್ದ ಘಿಯಾಸ್–ಉದ್–ದೀನ್–ಬಲ್ಬನ್ ಇದೇ ಸಿದ್ಧಾಂತವನ್ನು ಪ್ರತಿಪಾದಿಸಿದ್ದನು.

1688–89 ರಲ್ಲಿ ಬ್ರಿಟನ್‌ನಲ್ಲಿ ನಡೆದ 'ಗ್ಲೋರಿಯಸ್ ಕ್ರಾಂತಿ' ಯ ನಂತರ 'ರಾಜನ ದೈವೀಕ ಹಕ್ಕುಗಳ ಸಿದ್ಧಾಂತ' ಕ್ಕೆ ಮಹತ್ವ ಉಳಿಯಲಿಲ್ಲ. ಆದರೆ 'ರಾಷ್ಟ್ರಪಿತ' ಪರಿಕಲ್ಪನೆ ಹೊರಟು ಹೋಗಲಿಲ್ಲ. ಈಗಲೂ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ

'ರಾಷ್ಟ್ರಪಿತ' ಪರಿಕಲ್ಪನೆ ಜಾರಿಯಲ್ಲಿದೆ. ವಿಸ್ತೀರ್ಣತೆಯಲ್ಲಿ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಜಾರ್ಜ್ ವಾಷಿಂಗ್ಟನ್ ರಾಷ್ಟ್ರಪಿತ. ಅಜರ್‌ಬೈಜಾನ್‌ಗೆ ಹೈದರ್ ಅಲಿರ್ಜಾ ಓಗ್ಲು ಅಲಿಯೇವ್, ನ್ಯೂಜಿಲ್ಯಾಂಡ್‌ಗೆ ಜೇಮ್ಸ್ ಬುಸ್ಬೇ, ಕೆನಡಾಕ್ಕೆ ಜಾನ್ ಅಲೆಕ್ಸಾಂಡರ್ ಮೆಕ್‌ಡೊನಾಲ್ಡ್, ದಕ್ಷಿಣ ಆಫ್ರಿಕಾಕ್ಕೆ ನೆಲ್ಸನ್ ಮಂಡೇಲಾ, ಇಂಡೋನೇಷ್ಯಾಕ್ಕೆ ಡಾ. ಸುಕಾರ್ನೊ, ನೇಪಾಳಕ್ಕೆ ಪೃಥ್ವಿ ನಾರಾಯಣ್ ಷಾ, ವೆನಿಜುವೆಲಾಕ್ಕೆ ಸೈಮನ್ ಬೊಲಿವರ್, ಚೀನಾಕ್ಕೆ ಡಾ. ಸನ್ ಯಾತ್ ಸೆನ್ ರಾಷ್ಟ್ರಪಿತರಾಗಿ ಪರಿಗಣಿಸಲ್ಪಟ್ಟಿದ್ದಾರೆ. ಇನ್ನೂ ಸಾಕಷ್ಟು ರಾಷ್ಟ್ರಗಳು ತಮ್ಮ ತಮ್ಮ ರಾಷ್ಟ್ರಪಿತರನ್ನು ಗುರುತಿಸಿಕೊಂಡಿವೆ. ರಾಷ್ಟ್ರಪಿತರನ್ನು ಗುರುತಿಸುವುದರಲ್ಲಿ ಕೆಲವು ರಾಷ್ಟ್ರಗಳು ಸಾಂವಿಧಾನಿಕ ಶಾಸನವಾಗಿಯೇ ರಾಷ್ಟ್ರಪಿತರನ್ನು ಗುರುತಿಸಿದ್ದರೆ, ಇನ್ನು ಕೆಲವು ರಾಷ್ಟ್ರಗಳು ಜನರ ಆಡು ಮಾತಿನಲ್ಲಿ ರಾಷ್ಟ್ರಪಿತರನ್ನು ಗುರುತಿಸಿವೆ. ಇಂಥ ರಾಷ್ಟ್ರಗಳಲ್ಲಿ ರಾಷ್ಟ್ರಪಿತ ಎನ್ನುವ ಸ್ಥಾನಕ್ಕೆ ಕಾನೂನಿನ ಮಾನ್ಯತೆ ಇಲ್ಲ.

ಭಾರತ ಸಂವಿಧಾನವು ರಾಷ್ಟ್ರಪಿತ ಸ್ಥಾನಕ್ಕೆ ಕಾನೂನಿನ ಮಾನ್ಯತೆಯನ್ನು ನೀಡಿಲ್ಲ. ಅಂದರೆ ಮಹಾತ್ಮಾ ಗಾಂಧಿ ಜನರ ಆಡುಮಾತಿನ ಮೂಲಕ ರಾಷ್ಟ್ರಪಿತ ಎನಿಸಿಕೊಂಡಿದ್ದಾರೆಯೆ ಹೊರತು ಸಾಂವಿಧಾನಿಕವಾಗಿ ಅಲ್ಲ. ಆದರೆ ಸಾಂವಿಧಾನಿಕವಾಗಿ ರಾಷ್ಟ್ರಪಿತ ಸ್ಥಾನವನ್ನು ನೀಡಿದಾಗ ಶಾಸನಾತ್ಮಕವಾಗಿ ಆ ಸ್ಥಾನವನ್ನು ರದ್ದುಪಡಿಸಲು ಬರುತ್ತದೆ. ಉದಾಹರಣೆಗೆ, 1972 ರಲ್ಲಿ ಶೇಕ್ ಮುಜೀಬುರ್ ರೆಹಮಾನ್ ಅವರಿಗೆ ಬಾಂಗ್ಲಾ ದೇಶ ಸಾಂವಿಧಾನಿಕವಾಗಿ ರಾಷ್ಟ್ರಪಿತ ಸ್ಥಾನವನ್ನು ನೀಡಿತ್ತು. 2002 ಶಾಸನಾತ್ಮಕವಾಗಿಯೇ ಆ ಸ್ಥಾನವನ್ನು ತೆಗೆಯಿತು. ಭಾರತದಲ್ಲಿ ಗಾಂಧಿಯವರಿಗೆ ಶಾಸನಾತ್ಮಕವಾಗಿ ರಾಷ್ಟ್ರಪಿತ ಎಂಬ ಸ್ಥಾನ ಇಲ್ಲದಿರುವುದರಿಂದ ಅದನ್ನು ತೆಗೆಯುವ ಪ್ರಸ್ತಾವನೆಯೂ ಇಲ್ಲ.



ಮಹಾತ್ಮಾ ಗಾಂಧಿಯವರನ್ನು ರಾಷ್ಟ್ರಪಿತ ಎಂದು ಮೊದಲು ಸಂಬೋಧಿಸಿದ್ದು ಸುಭಾಸ್‌ಚಂದ್ರ ಭೋಸರು. ಭೋಸರನ್ನು ಅನುಸರಿಸಿ ಇತರರು ಗಾಂಧಿಯವರನ್ನು ರಾಷ್ಟ್ರಪಿತ ಎಂದು ಕರೆಯುವ ಪರಿಪಾಠ ಬೆಳೆಯಿತು. ಇಲ್ಲಿ, ರಾಷ್ಟ್ರಪಿತ ಎಂದು ಕರೆಯಲು ಗಾಂಧಿ ಯಾಕೆ ಅರ್ಹರು ಎಂಬುದು ಮುಖ್ಯ ಸಂಗತಿ.

ಭಾರತವನ್ನು ಯಾರೂ ಹುಟ್ಟಿಸಲಿಲ್ಲ, ಗಾಂಧಿಗಿಂತ ಮೊದಲೂ ಭಾರತ ಇತ್ತು ಎನ್ನುವುದು ಗಾಂಧಿ ರಾಷ್ಟ್ರಪಿತ ಅಲ್ಲ ಎನ್ನುವವರ ವಾದಗಳಲ್ಲಿ ಪ್ರಮುಖವಾದ ಒಂದು ಅಂಶವಾಗಿದೆ. ಹಾಗಿದ್ದರೆ ಉಳಿದೆಲ್ಲ ರಾಷ್ಟ್ರಗಳನ್ನು ಅಲ್ಲಿನ ರಾಷ್ಟ್ರಪಿತರು ಹುಟ್ಟಿಸಿದ್ದಾರೆಯೆ? ಇಲ್ಲ. ಎಲ್ಲ ರಾಷ್ಟ್ರಗಳೂ ಇದ್ದ ರಾಷ್ಟ್ರಗಳೇ ಆಗಿವೆ. ಭಾರತ ಎನ್ನುವ ಭೂಪ್ರದೇಶ ಇತ್ತು. ಭಾರತದಲ್ಲಿ ಏಕತೆಯೂ ಇತ್ತು. ಆದರೆ ಅದು ಸಾಂಸ್ಕೃತಿಕವಾಗಿ ಇತ್ತೇ ಹೊರತು ರಾಜಕೀಯಾತ್ಮಕ ಸಂಘಟನೆ ಆಗಿರಲಿಲ್ಲ. ಸಮುದ್ರಗುಪ್ತ, ಎರಡನೆಯ ಚಂದ್ರ ಗುಪ್ತ ವಿಕ್ರಮಾದಿತ್ಯ, ಅಲ್ಲಾ ಉದ್ ದೀನ್ ಖಿಲ್ಜಿ ಮುಂತಾದ ರಾಜರುಗಳ ಸಾಮ್ರಾಟರಾಗಿ ಭಾರತದ ಇತರ ರಾಜರುಗಳನ್ನು ತಮ್ಮ ಏಕ ಚಕ್ರಾಧಿಪತ್ಯಕ್ಕೆ ತಂದಿದ್ದರೂ, ಅವರ ಕಾಲದ ನಂತರ ಅದು ಉಳಿಯಲಿಲ್ಲ. ಭಾರತದ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ರಾಜರುಗಳು ಯಾವನೇ ಒಬ್ಬ ಸಾಮ್ರಾಟನ ಪರಮಾಧಿಕಾರಕ್ಕೆ ಒಳಪಡದೆಯೇ ಆಳುತ್ತಿದ್ದರು. ಆದ್ದರಿಂದಲೇ ಬ್ರಿಟಿಷರ ವಿರುದ್ಧ ಯುದ್ಧ ಮಾಡಿದರಾದರೂ ಮರಾಠರಿಗೆ ತಮ್ಮ ಪ್ರಾಂತ್ಯದಲ್ಲಿ ಬ್ರಿಟಿಷರು ಇರಬಾರದು ಎನಿಸಿತ್ತೇ ಹೊರತು ಬಂಗಾಳದಲ್ಲಿ ಇರಬಾರದು ಎಂದು ಅನಿಸಿರಲಿಲ್ಲ. ಆಂಗ್ಲೋ-ಸಿಖ್ ಯುದ್ಧಗಳೂ ನಡೆದಿವೆ. ಸಿಖ್ಖರಿಗೆ ಪಂಜಾಬ್‌ನಲ್ಲಿ ಬ್ರಿಟಿಷರು ಇರಬಾರದು ಎಂದೇ ಇತ್ತು. ಆದರೆ ಮುಂಬೈಯಲ್ಲಿ ಬ್ರಿಟಿಷರು ಇರಬಾರದು ಎಂದು ಇರಲಿಲ್ಲ. ಗಾಂಧಿ ಹಿಂಸೆಯನ್ನು ಒಪ್ಪಲಿಲ್ಲ ಎನ್ನುವ ಕಾರಣಕ್ಕಾಗಿ ಗಾಂಧಿಯನ್ನು ದ್ವೇಷಿಸುವ ಅನೇಕರಿಗೆ ಗಾಂಧಿ ಹುಟ್ಟುವ ಮೊದಲೇ ಬ್ರಿಟಿಷರ ವಿರುದ್ಧ ಹಲವು ಸಶಸ್ತ್ರ ಯುದ್ಧಗಳು ನಡೆದಿದ್ದವು, ಆದರೂ ಬ್ರಿಟಿಷರನ್ನು ಹೊರ ಹಾಕಲು ಆಗಿರಲಿಲ್ಲ ಎಂದು ಗೊತ್ತಿರಬೇಕಾಗುತ್ತದೆ. ಒಂದು ವೇಳೆ ಬ್ರಿಟಿಷರ ವಿರುದ್ಧ ಅಲ್ಲಲ್ಲಿ ಯುದ್ಧ

ಮಾಡಿದವರೆಲ್ಲರೂ ಒಟ್ಟಾಗಿ ಯುದ್ಧ ಮಾಡಿದ್ದರೆ ಬ್ರಿಟಿಷರನ್ನು ಹೊರ ಹಾಕಬಹುದಿತ್ತು. ಆದರೆ ಬ್ರಿಟಿಷರ ವಿರುದ್ಧ ಇರುವವರನ್ನೆಲ್ಲ ಸಂಘಟಿಸುವ ಕೆಲಸ ನಡೆದಿರಲಿಲ್ಲ. 1885 ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಾದಾಗ ಅದು ಲಯನ್ಸ್ ಕ್ಲಬ್‌ನ ರೀತಿಯ ಸಂಸ್ಥೆಯಾಗಿತ್ತು. 1905 ರಲ್ಲಿ ಬಂಗಾಳ ವಿಭಜನೆಯಾದಾಗ ಕಾಂಗ್ರೆಸ್‌ನ ತೀವ್ರಗಾಮಿಗಳು;ಮುಖ್ಯವಾಗಿ ಬಾಲಗಂಗಾಧರ ತಿಲಕರು ಜನರನ್ನು ಸಂಘಟಿಸುವ ಕೆಲಸವನ್ನು ಮಾಡಿದ್ದರು. ಆದರೆ ಆ ಸಂಘಟಿಸುವಿಕೆ ಕೂಡ ಸಮಗ್ರ ಭಾರತವನ್ನು ಆವರಿಸಿರಲಿಲ್ಲ. ಸಮಗ್ರ ಭಾರತವನ್ನು ಒಂದು ಶಕ್ತಿಯಾಗಿ ಸಂಘಟಿಸಿದ್ದು ಗಾಂಧಿಯೇ. ಜಲಿಯನ್ ವಾಲಾಭಾಗ್ ಹತ್ಯಾಕಾಂಡದ ನಂತರ ಪಂಜಾಬ್‌ಗೆ ಹೊರಟು ನಿಂತ ಗಾಂಧಿಯವರನ್ನು ಪೊಲೀಸರು ತಡೆದಾಗ ಗಾಂಧಿ, " ಪಂಜಾಬ್‌ನಲ್ಲಿ ನನ್ನನ್ನು ಯಾರಿಗೂ ಗೊತ್ತಿಲ್ಲ. ಆದ್ದರಿಂದ ನಾನು ಹೋಗುವುದರಿಂದ ಸಮಸ್ಯೆ ಆಗಲಾರದು" ಎಂದೇ ಹೇಳಿದ್ದರು. ಆದರೆ ಗಾಂಧಿ ಪಂಜಾಬ್‌ಗೆ ಹೋದಾಗ ಸೇರಿದ ಜನದಟ್ಟಣೆ ಗಾಂಧಿ ಯಾವ ರೀತಿ ಇಡೀ ಭಾರತವನ್ನು ಸಂಪರ್ಕಿಸಿದ್ದಾರೆ ಎಂದು ಗಾಂಧಿಗೆ ಗೊತ್ತು ಮಾಡಿತ್ತು.

ಇಡೀ ದೇಶವನ್ನು ಸಂಘಟಿಸಿದವರು ಗಾಂಧಿಯಾದದ್ದರಿಂದಲೇ ಆ ಕಾಲದ ಇತರ ನಾಯಕರು ಗಾಂಧಿಯವರ ನಾಯಕತ್ವವನ್ನು ನಿರಾಕರಿಸಲಿಲ್ಲ. ಗಾಂಧಿಯವರ ವಿಚಾರ, ಹೋರಾಟದ ಸ್ವರೂಪ, ವಿಧಾನವನ್ನು ವಿರೋಧಿಸಿದವರೂ ಗಾಂಧಿಯವರನ್ನು ರಾಷ್ಟ್ರೀಯ ನಾಯಕನಾಗಿಯೇ ಗುರುತಿಸಿದ್ದರು. ಇವತ್ತು ಗಾಂಧಿ ರಾಷ್ಟ್ರೀಯ ಚಳವಳಿಯ ನಾಯಕ ಆಗಿರಲಿಲ್ಲ ಎನ್ನುವವರು ಗಾಂಧಿ ಅಲ್ಲದಿದ್ದರೆ ಬೇರೆ ಯಾರು ರಾಷ್ಟ್ರೀಯ ನಾಯಕ ಆಗಿದ್ದರು ಎಂದು ಹೇಳಬೇಕಾಗುತ್ತದೆ. ನಾಯಕನ ಜೊತೆ ಒಂದೊ ಸಮ್ಮತಿ ಅಥವಾ ಅಸಮ್ಮತಿಯ ಸಂಬಂಧ ಎಲ್ಲರಿಗೂ ಇರುತ್ತದೆ. ಸಮ್ಮತಿ ಇದ್ದವರೆಲ್ಲ ಗಾಂಧಿಯವರೊಂದಿಗೆ ಹೋದರು.




ಅಸಮ್ಮತಿ ಇದ್ದವರು ವಿರೋಧಿಸಿದ್ದು ಗಾಂಧಿಯನ್ನೆ ಹೊರತು ಇತರ ನಾಯಕರನ್ನಲ್ಲ. ಗಾಂಧಿಯವರನ್ನು ಪೂರ್ತಿಯಾಗಿ ನಿರಾಕರಿಸಿದವರು ಮಹಮದಾಲಿ ಜಿನ್ನಾ. ಆದರೆ ಅವರು ಪ್ರತ್ಯೇಕ ದೇಶ ಕೇಳಿದರೇ ಹೊರತು ಸಮಗ್ರ ಭಾರತಕ್ಕೆ ಗಾಂಧಿಯಲ್ಲ,ತಾನೇ ನಾಯಕ ಆಗುತ್ತೇನೆ ಎಂದು ಹೊರಡಲಿಲ್ಲ. ಅಂಬೇಡ್ಕರ್ ಗಾಂಧಿಯವರನ್ನು ಪ್ರಶ್ನಿಸಿದರೇ ಹೊರತು ಪುರುಷೋತ್ತಮ ದಾಸ್ ಟಂಡನ್ ಅನ್ನು ಪ್ರಶ್ನಿಸಲಿಲ್ಲ. ಸಾವರ್ಕರ್ ಮೋತೀಲಾಲ್ ನೆಹರೂ ಅವರ ಸಿದ್ಧಾಂತ ಸರಿ ಇಲ್ಲ, ಆದ್ದರಿಂದ ತಾನು ಹಿಂದೂ ಮಹಾ ಸಭಾ ಮಾಡುತ್ತೇನೆ ಎನ್ನಲಿಲ್ಲ. ಅವರೂ ಕೂಡ ಪ್ರಶ್ನಿಸಿದ್ದು ಗಾಂಧಿಯನ್ನೆ, ಮತ್ತು ಸ್ವತಃ ಸಾವರ್ಕರ್, ದೇಶದ ಸ್ವಾತಂತ್ರ್ಯಕ್ಕೆ ಗಾಂಧಿಯವರ ಅಗತ್ಯ ಇದೆ ಎಂದೇ ಹೇಳಿದ್ದರು. ಸುಭಾಸ್ಚಂದ್ರ ಭೋಸರಾದರೂ ಕಾರ್ನಾಡ್ ಸದಾಶಿವ ರಾಯರ ನಿಲುವನ್ನು ತಾನು ಒಪ್ಪುವುದಿಲ್ಲ, ಆದ್ದರಿಂದ ಪ್ರತ್ಯೇಕ ಹೋರಾಟ ಮಾಡುತ್ತೇನೆ ಎನ್ನಲಿಲ್ಲ. ಅವರೂ ಕೂಡ ಗಾಂಧಿಯವರ ನಿಲುವಿನ ಆಧಾರದಲ್ಲೆ ತನ್ನ ದಾರಿಯನ್ನು ಕಂಡುಕೊಂಡವರು. ಮಹಾನ್ ಕ್ರಾಂತಿಕಾರಿ ಚಂದ್ರಶೇಖರ ಆಜಾದ್ ಕೂಡ ಮೊದಲ ಹೋರಾಟವನ್ನು 'ಗಾಂಧಿ ಕಿ ಜೈ' ಎಂದೇ ಶುರು ಮಾಡಿದ್ದು. ಅಂದರೆ ವೈಚಾರಿಕ ವಿರೋಧಿಗಳೆಲ್ಲರೂ ಪ್ರಶ್ನಿಸಿದ್ದು ಗಾಂಧಿಯನ್ನೆ ಹೊರತು ಇತರ ನಾಯಕರನ್ನಲ್ಲ. ಯಾವಾಗಲೂ ಪ್ರಧಾನ ನಾಯಕನನ್ನೆ ಪ್ರಶ್ನಿಸುವುದು, ಉಳಿದವರನ್ನು ಯಾರು ಯಾಕೆ ಪ್ರಶ್ನಿಸುತ್ತಾರೆ.

ಯಾವುದೇ ಕಾಲದ ನಾಯಕರಲ್ಲಿ ಇತರರನ್ನು ತಮ್ಮೊಂದಿಗೆ ಬರುವಂತೆ ಮಾಡುವ ಗುಣ; ಕನಿಷ್ಠ ಪಕ್ಷ ವಿಶ್ವಾಸಕ್ಕಾದರೂ ತೆಗೆದುಕೊಳ್ಳುವ ಗುಣ ಇರುತ್ತದೆ. ಸಾವರ್ಕರ್ ಗಾಂಧಿಯವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಗಾಂಧಿಯ ಬಳಿಗೆ ಹೋಗಲಿಲ್ಲ. ಆದರೆ ಗಾಂಧಿ ಸಾವರ್ಕರ್ ಬಳಿ ಮನವರಿಕೆ ಮಾಡಿಕೊಡಲು ಬಂದರು. ಸುಭಾಸ್ಚಂದ್ರ ಭೋಸರಿಗೂ ಮನವರಿಕೆ ಮಾಡಲು ಹೊರಟರು. ಅಂಬೇಡ್ಕರರ ಬಳಿಯೂ ಸಮಸ್ಯೆ ಪರಿಹಾರದ ಸೂತ್ರ ಕಂಡುಕೊಂಡರು, ಸಂವಿಧಾನ ಸಮಿತಿಗೆ ಅಂಬೇಡ್ಕರರನ್ನು ಸೂಚಿಸಿದರು. ಜಿನ್ನಾ ಗಾಂಧಿಯ ಬಳಿ ಬರಲಿಲ್ಲ. ಬದಲು ಹೇಗಾದರೂ ಸರಿ ಮಾಡಲು ಆಗುತ್ತದೆಯೇ ಎಂದು ಗಾಂಧಿಯೇ ಜಿನ್ನಾ ಬಳಿ ಹೋಗಿ ಮಾತನಾಡಿದರು. ಎಲ್ಲರ ಬೇಡಿಕೆಗಳಿಗೂ ಸ್ಪಂದಿಸುವ ಗುಣ ಇರುವುದು ನಾಯಕನಿಗೆ. ಆ ಕೆಲಸವನ್ನು ಮಾಡಿದ್ದು ಗಾಂಧಿಯೇ. ಇವತ್ತು ಗಾಂಧಿ ವಿರೋಧಿಗಳು ತಮ್ಮನ್ನು ತಾವು ಆರ್.ಎಸ್.ಎಸ್.ನೊಂದಿಗೆ ಗುರುತಿಸಿಕೊಳ್ಳುತ್ತಾರೆ. ಆದರೆ ಆರ್.ಎಸ್.ಎಸ್.ನ ಸ್ಥಾಪಕ ಕೇಶವ ಬಲರಾಮ ಹೆಡಗೆವಾರ್ ಗಾಂಧಿಯವರೊಂದಿಗೆ ಸತ್ಯಾಗ್ರಹಕ್ಕೆ ಹೋದವರು. ಮತೀಯ ಗಲಭೆಯನ್ನು ತಡೆಯುವ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿದಾಗ ಗೋಳ್ವಲ್ಕರ್ ಕೂಡ ಗಾಂಧಿಯೊಂದಿಗೆ ಪತ್ರಿಕಾ ಗೋಷ್ಠಿಯಲ್ಲಿ ಕುಳಿತು,"ನಾನು ಮಾತಾಡುವುದಿಲ್ಲ. ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ" ಎಂದವರು.

ಹಿಂದೆ ಸಾಮ್ರಾಟರು ರಾಜಕೀಯವಾಗಿ ಸಂಘಟಿಸಿದ್ದ ಭಾರತಕ್ಕೆ ಏಕರೂಪಿ ಶಾಸನ ಇಲ್ಲದ್ದರಿಂದ ಅವರ ಕಾಲದ ನಂತರ ಭಾರತ ಒಟ್ಟಾಗಿ ಉಳಿಯಲಿಲ್ಲ. ಗಾಂಧಿ ಸಂಘಟಿಸಿದ ಭಾರತ ಗಾಂಧಿಯ ನಂತರವೂ ಒಟ್ಟಾಗಿ ಉಳಿಯಲು ಅಂಬೇಡ್ಕರ್ ಬರೆದ ಸಂವಿಧಾನ ಎಂಬ ಶಾಸನವಿದೆ. ಅಂದ ಮೇಲೆ ಭಾರತಕ್ಕೆ ಗಾಂಧಿಯ ಹೊರತು ಬೇರಾರು ರಾಷ್ಟ್ರಪಿತ?

(ಲೇಖನ ಕೃಪೆ : ಪ್ರಜಾವಾಣಿ ದಿನಪತ್ರಿಕೆ)



Gandhigiri of Ramesh Bhai

- GOPAL HOSUR IPS (R)

Lage Raho Munna Bhai was a successful Bollywood movie of 2006, that popularised the word "Gandhigiri".

In the movie, the reel life, the hero (not my favourite), Sanjay Dutt gets into the spirit of Gandhiji and begins to address problematic issues using Gandhian methods, though may not have practiced in real life then.

My story of Ramesh's Gandhigiri is real .

Ramesh of Aduvalli village, NR Pura Taluk of Chikmagalur District was one of the eight accused in a murder case of 1994, and was convicted of murder in 1999 with imprisonment for 16 years.

During his time in prison, Ramesh got an unexpected opportunity to participate in the "theatre therapy" initiated by Hulugappa Kattimani's " Sankalpa". It was a stroke of irony and fate.

In the play "Kasturaba", that dealt with inner conflicts of Gandhi dealing with his own family life, Ramesh was cast as MK Gandhi.

At first, it seemed like just another activity to pass time. Little did Ramesh or anyone know that the role of the Mahatma would change his life forever.

As Ramesh delved into the character of Gandhi, he began to embody the very principles that the Mahatma stood for. The man who once faced life behind bars for a violent act found himself deeply moved by the ideals of non-violence, simplicity, and self-discipline. After over 20 exhibitions of the play in public places across Karnataka, the character had given him more than a role—it had given him a mirror to reflect upon his own life.

The transformation was visible not only on stage but off it too. Ramesh became a teetotaller, gave up meat, embraced vegetarianism and simplicity. His commitment to these changes wasn't just a prison routine; they became a way of life.

Upon his release in Nov 2015, the village of Chikmagalur was stunned. The man who had once been feared was now being sought for advice and wisdom. Ramesh's transformation was so profound that Villagers, who once shunned him, now seek his counsel on matters of conflict, family disputes, and even community issues.

Ramesh's story is not just about personal redemption. It is about the power of change. The strength of human spirit. The unexpected ways life can turn around. Through the stage, Ramesh found a new role not only as Gandhi on the stage, but to merge with the society seamlessly.

Grateful to Hulugappa Kattimani, an acquaintance who has turned a dear friend for taking me in, in his endeavour for the last 27 years.

Ramesh SV is now 56, with two children and I felt like speaking to him yesterday.

Ramesh as Gandhi in Kasturba and in his village now

■



‘ಗಾಂಧಿ ಸಿನಿಮಾ ಕ್ಲಬ್’ನ್ನು ಅಂತರ ರಾಷ್ಟ್ರೀಯ ಚಲನ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಉದ್ಘಾಟಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ, ಕಾರ್ಯಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್, ಗಿರೀಶ್ ಕಾಸರವಳ್ಳಿ ,ಜನಪರ ಹೋರಾಟಗಾರ ಇ ಕೆ ಮೆನನ್, ವಿಧಾನ ಪರಿಷತ್ ಮಾಜಿ ಶಾಸಕ ಮೋಹನ್ ಕೊಂಡಜ್ಜಿ, ಗಾಂಧಿ ಸಿನಿಮಾ ಕ್ಲಬ್ ಸಂಚಾಲಕ ವಿಜಯ್ ಹನಕೆರೆ ಚಿತ್ರದಲ್ಲಿದ್ದಾರೆ .

ಗಾಂಧಿ ಸಿನಿಮಾ ಕ್ಲಬ್

ಯುವಜನರಿಗೆ ಗಾಂಧಿ ವಿಚಾರಗಳನ್ನು ತಿಳಿಸಲು ದೃಶ್ಯ ಮಾಧ್ಯಮವೇ ಸೂಕ್ತ . ಓದಿನ ಅಭಿರುಚಿ ಮತ್ತು ಕುತೂಹಲಗಳು ಯುವಜನರಲ್ಲಿ ಕಾಣೆಯಾಗುತ್ತಿರುವ ಈ ಸಂದರ್ಭದಲ್ಲಿ ಚಲನ ಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳ ಮೂಲಕ ಗಾಂಧಿ ವಿಷಯ ಮತ್ತು ವಿಚಾರಗಳನ್ನು ಹಳೆಯ ಚಲನಚಿತ್ರಗಳನ್ನು ಪ್ರದರ್ಶನ ಮಾಡಿ ಅದಕ್ಕೆ ಸಂಬಂಧಿಸಿದಂತೆ ಸಂವಾದವನ್ನು ಏರ್ಪಡಿಸುವ ಮೂಲಕ ಯುವಜನರ ಜೊತೆ ಬೇರೆಯ ಬೇಕು ಎನ್ನುವ ಹೊಸ ನೋಟಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ತೆರೆದುಕೊಳ್ಳುತ್ತಿದೆ .

ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ ಈಗ ಅಮೃತ ಮಹೋತ್ಸವದ ಸಂಭ್ರಮ . ಮಹಾತ್ಮ ಗಾಂಧಿಯವರು ಹಂತಕರ ಗುಂಡಿಗೆ 1948 ರ ಜನವರಿ 30 ರಂದು ಬಲಿಯಾದ ದಿನವನ್ನು ಸರ್ವೋದಯ ದಿನಾಚರಣೆ ಹೆಸರಿನಲ್ಲಿ ಪ್ರತಿ ವರ್ಷ ಆಚರಿಸಲಾಗುತ್ತಿದೆ . ಈ ಸಾಲಿನ ಸರ್ವೋದಯ ದಿನಾಚರಣೆಯಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ 75 ನೇ ವರ್ಷಾಚರಣೆಯನ್ನು ಆರಂಭಿಸಿದ್ದು 2026 ರ ಜನವರಿ 30 ರವರೆಗೆ ಒಂದು ವರ್ಷ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ . ಇದರ ಅಂಗವಾಗಿ ಫೆಬ್ರವರಿ 27 ರಂದು ಗಾಂಧಿ ಭವನದಲ್ಲಿ ಗಾಂಧಿ ಸಿನಿಮಾ ಕ್ಲಬ್ ನ್ನು ಉದ್ಘಾಟಿಸಲಾಯಿತು .



ಶ್ಯಾಮ್ ಬೆನೆಗಲ್ ನಿರ್ದೇಶನದ ' ಮೇಕಿಂಗ್ ಆಫ್ ಮಹಾತ್ಮ ' ಸಿನಿಮಾ ಪ್ರದರ್ಶನ ಮತ್ತು ಸಂವಾದ .

ಅಂತರ ರಾಷ್ಟ್ರೀಯ ಖ್ಯಾತಿಯ ಚಲನ ಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿಯವರು ಗಾಂಧಿ ಸಿನಿಮಾ ಕ್ಲಬ್ ಉದ್ಘಾಟಿಸಿದರು . ಈ ಕಾರ್ಯಕ್ರಮದ ಆರಂಭಿಕ ಚಲನ ಚಿತ್ರವಾಗಿ ರಿಚರ್ಡ್ ಆಟೆನ್ ಬರೋ ಅವರ ಗಾಂಧಿ ಸಿನಿಮಾ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು . ಈ ಕಾರ್ಯಕ್ರಮದ ಪರಿಕಲ್ಪನೆ ಮಡಿದ ಗಾಂಧಿ ಸ್ಮಾರಕ ನಿಧಿಯ ಕಾರ್ಯಾಧ್ಯಕ್ಷರಾದ ಎನ್ ಆರ್ ವಿಶುಕುಮಾರ ಅವರು ಕಾರ್ಯಕ್ರಮದ ಆಶಯ ನುಡಿಗಳನ್ನು ಆಡಿದರು . ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ■

ಪ್ರಜಾವಾಣಿ

ಯುವಜನರಿಗೆ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಕರೆ

'ಗಾಂಧೀಜಿ ಆದರ್ಶ, ಮೌಲ್ಯ ಪಾಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧೀಜಿ ಅವರ ಅಹಿಂಸಾ ತತ್ವಗಳು ಮತ್ತು ಸರ್ವೋದಯ ಸಿದ್ಧಾಂತಗಳನ್ನು ಯುವಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು' ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಗಾಂಧಿ ಸಿನಿಮಾ ಕ್ಲಬ್' ಉದ್ಘಾಟಿಸಿ, ಸಂವಾದ ಸರಣಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, 'ಗಾಂಧೀಜಿ ಅವರ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿಗಳನ್ನು ಹರಿಬಿಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅವರ ಬಗ್ಗೆ ವಾಸ್ತವ ತಿಳಿದುಕೊಳ್ಳಲು ಸಾಹಿತ್ಯ ಕೃತಿಗಳನ್ನು ಓದಬೇಕು. ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಬಳಿಕ ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನೇ ಬದಲಾಯಿಸಿದರು' ಎಂದರು.



ಕಾರ್ಯಕ್ರಮದಲ್ಲಿ ಗಿರೀಶ್ ಕಾಸರವಳ್ಳಿ ಅವರು (ಎಡದಿಂದ ಮೂರನೆಯವರು) 'ಗಾಂಧಿ ಸಿನಿಮಾ ಕ್ಲಬ್' ಉದ್ಘಾಟಿಸಿದರು. (ಎಡದಿಂದ) ವೂಡೇ ಪಿ. ಕೃಷ್ಣ, ಎನ್‌. ಆರ್‌. ವಿಶುಕುಮಾರ್‌, ಇ.ಕೆ. ಮೆನನ್‌, ಕೊಂಡಜ್ಜಿ ಮೋಹನ್ ಮತ್ತು ವಿಜಯ್ ಹನಕೆರೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಗಾಂಧೀಜಿ ಅವರ ಜೀವನ ಚರಿತ್ರೆ ಹಾಗೂ ತತ್ವಗಳ ಮೇಲೆ ಅನೇಕ ಚಲನಚಿತ್ರಗಳು ಬಂದಿವೆ. ಅವರ ಹೆಸರನ್ನು ಬಳಸಿಕೊಂಡು ಕಮರ್ಷಿಯಲ್ ಚಿತ್ರಗಳನ್ನೂ ನಿರ್ಮಿಸಲಾಗಿದೆ. ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು. ಗಾಂಧೀಜಿ ಅವರು ಭಿನ್ನಾಭಿಪ್ರಾಯ ಇರುವ ವ್ಯಕ್ತಿಗಳ ಜತೆಗೂ ಆರೋಗ್ಯಕರ ಸಂವಾದ ನಡೆಸಿ, ವಿಶ್ವಾಸಕ್ಕೆ ಪಡೆಯುತ್ತಿದ್ದರು. ಇಂದಿನ ಪರಿಸ್ಥಿತಿಗೆ ಈ ರೀತಿಯ ಸಂವಾದಗಳು ಅಗತ್ಯ' ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ನಿಧನದ ನಂತರವೂ ತತ್ವಾದರ್ಶಗಳು ಶಾಶ್ವತವಾಗಿ ಉಳಿಯುತ್ತವೆ. ಗಾಂಧೀಜಿ ಅವರ ತತ್ವಾದರ್ಶಗಳನ್ನು ಜನರು ಮರೆಯಬಾರದು. ಅವರ ತತ್ವ, ಸಿದ್ಧಾಂತ, ವಿಚಾರಗಳು ಸರ್ವಕಾಲಕ್ಕೂ ಪ್ರಸ್ತುತ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯಾಧ್ಯಕ್ಷ ಎನ್‌.ಆರ್‌. ವಿಶುಕುಮಾರ್‌, 'ಗಾಂಧಿ ಮತ್ತು ಅಂಬೇಡ್ಕರ್‌ ಜಗತ್ತಿನ ಎರಡು ಕಣ್ಣುಗಳು. ಇಂತಹ ವ್ಯಕ್ತಿಗಳ ಮೇಲೆ ಅನಗತ್ಯ ದ್ವೇಷ ಸಾಧಿಸಬಾರದು' ಎಂದು ಹೇಳಿದರು.

ವಿಜಯನಗರ ಕಾಲೇಜಿನ ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಶರಣ ಬಸವ ಅವರು 'ಗಾಂಧೀಜಿ ಅವರ ತತ್ವಾದರ್ಶಗಳ ಪ್ರಸ್ತುತತೆ' ಬಗ್ಗೆ ಮಾತನಾಡಿದರು.

ಬಳಿಕ 'ಗಾಂಧಿ' ಸಿನಿಮಾ ಪ್ರದರ್ಶಿಸಲಾಯಿತು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಚಲನಚಿತ್ರ ವೀಕ್ಷಿಸಿದರು.

[redacted]



ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು.

ಕಸ್ತೂರಬಾ ಜೊತೆ ನನ್ನ ಹೆಜ್ಜೆ



ಶಶಿಕಲಾ ಅವರ ಏಕವ್ಯಕ್ತಿ ಪ್ರಯೋಗ 'ಕಸ್ತೂರಬಾ' ಅತ್ಯಂತ ಜನಪ್ರಿಯವಾಗಿದೆ. ಅವರು ಈ ಪ್ರಯೋಗ ಹುಟ್ಟಿದ ಹಿನ್ನೆಲೆಯನ್ನು ಕುರಿತು ಇಲ್ಲಿ ಮನ ಬಿಚ್ಚಿದ್ದಾರೆ

ಗೆಳೆಯನಾಗಿ ವೃತ್ತಿಯಲ್ಲಿ ಜೊತೆಯಾಗಿ ಬದುಕಿನಲಿ ಒಂದಾಗಿ ನನ್ನೊಂದಿಗಿದ್ದು ಇಪ್ಪತ್ತೆರಡು ವರ್ಷದ ಹಿಂದೆ ನೆನಪಿನ ಗಿಡ ನೆಟ್ಟುಹೋದವನು ಬಸವರಾಜ ಕೊಡಗೆ. ಅವನ ನೆನಪಿಗೆ ಏನಾದರೂ ಮಾಡಬೇಕು ಅನಿಸಿದಾಗ ತೋಚಿದ್ದು, ನಾನೊಬ್ಬಳೆ ಅಭಿನಯಿಸುವ ಏಕವ್ಯಕ್ತಿ ಪ್ರದರ್ಶನ. ಹೀಗೆ 2003ರಿಂದ ಅವನ ನೆನಪಿನ ದಿನಕ್ಕೆ ಏಕವ್ಯಕ್ತಿ ಪ್ರದರ್ಶನ ಮಾಡಲು ಪ್ರಾರಂಭಿಸಿದೆ. ಹೀಗೆ ಅನೇಕ ನಾಟಕಗಳನ್ನು ಪ್ರದರ್ಶಿಸಿದೆ.

ಇಡೀ ನಾಟಕದ ಜವಾಬ್ದಾರಿ ಒಬ್ಬಳ ಮೇಲೆ ಇರುತ್ತದೆ. ಒಮ್ಮೆ ರಂಗದ ಮೇಲೆ ಬಂದರೆ ಮುಗಿಯುವವರೆಗೆ ನಿರ್ಗಮಿಸಲು ಸಾಧ್ಯವಿಲ್ಲ. ನಾಟಕವನ್ನು ಹಿಡಿದಿಡುವ ಶಕ್ತಿ ಹೊಂದಿರಬೇಕು. ಏಕವ್ಯಕ್ತಿ ಪ್ರದರ್ಶನ ಒಂದು ಜವಾಬ್ದಾರಿಯಾಗಿರುತ್ತದೆ. ನಾನು ನನ್ನ ಈ ರಂಗಯಾನದಲ್ಲಿ ಅನೇಕ ಬಗೆಯ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಆದರೆ ಕಸ್ತೂರಬಾ ವಿಶಿಷ್ಟವಾಗಿತ್ತು. ಗಾಂಧೀಜಿಯವರ ನೆರಳಾಗಿಯೇ ಅವರ ಬದುಕಿನುದ್ದಕ್ಕೂ ತಮ್ಮ ಬಾಳನ್ನು ರೂಢಿಸಿಕೊಂಡ 'ಕಸ್ತೂರಬಾ' ಅವರನ್ನು ಗಾಂಧೀಜಿಯವರ ಪತ್ನಿ ಕೆಲವೊಮ್ಮೆ ಗಾಂಧೀಜಿಯವರ ತೀರ್ಮಾನಗಳಲ್ಲಿ ಅವರ ವಿರೋಧವಿದ್ದರೂ ಒಪ್ಪಿಕೊಂಡು ಬದುಕಿದ ಸಾಧ್ವಿ ಶಿರೋಮಣಿ ಎಂಬುದಷ್ಟೇ ಎಂದು ತಿಳಿದಿರುವವರೇ ಬಹಳ ಮಂದಿ. ಆದರೆ ಕಸ್ತೂರಬಾ ಬಗ್ಗೆ ಅಧ್ಯಯನ ಮಾಡುತ್ತಾ ಹೋದಂತೆ ಅವರ ಬಹುಮುಖಿ ವ್ಯಕ್ತಿತ್ವ, ಅವರ ಬದುಕಿನ ಸಂಕೀರ್ಣತೆ,ಅವರು ಎದುರಿಸಿದ ಸವಾಲುಗಳು, ತಮ್ಮ ಸಾಂಸಾರಿಕ ಬದುಕಿನಲ್ಲಿ ಅವರು ನಿಭಾಯಿಸಿದ ಸಮಸ್ಯೆಗಳು, ಸುಖ, ಸಂತೋಷಗಳು, ಸಂತೃಪ್ತ ಬದುಕಿನ ಕ್ಷಣಗಳನ್ನು ಒಟ್ಟಾರೆಯಾಗಿ ಹಿಡಿದಿಡುವ ಒಂದು ಪ್ರಯತ್ನವಾಗಿ ಕಸ್ತೂರಬಾ ರೂಪಗೊಳ್ಳತೊಡಗಿತು. ಒಟ್ಟು 'ಕಸ್ತೂರಬಾ' ನಾಟಕದ ಬಂಧದಲ್ಲಿ 'ಕಸ್ತೂರಬಾ ಹಾಗೂ ನಟಿ'

ಮುಖಾಮುಖಿಯಾಗುತ್ತಾ ಭಾರತೀಯ ಮಹಿಳೆಯ ಅನೇಕ ಸ್ಥಿತ್ಯಂತರಗಳನ್ನು ದೃಶ್ಯದ ಮೂಲಕ ಕಟ್ಟಿಕೊಡುವ ಪ್ರಯತ್ನಮಾಡಿದ್ದೇನೆ.

ಆಧುನಿಕ ಪ್ರಜ್ಞೆಯ ಮಹಿಳೆ 70–80 ವರ್ಷಗಳ ಹಿಂದಷ್ಟೆ ಬದುಕಿದ ಒಬ್ಬ ಮಹಾನ್ ಮಹಿಳೆಯ ಶಕ್ತಿ ದೌರ್ಬಲ್ಯಗಳನ್ನು, ನಿರೂಪಿಸುವ ನಿಟ್ಟಿನಲ್ಲಿ, ತಾನು, ತನ್ನ ಬದುಕು, ಸಂಸಾರ, ಗೆಳೆತನ, ಯಶಸ್ಸು ಎಲ್ಲದರಲ್ಲೂ ಕಸ್ತೂರಬಾ ಅವರ ಮುಂದೆ ಮಂಡಿಯೂರಿ ಅರ್ಥೈಸುವ ಪ್ರಯತ್ನಕ್ಕೆ ತೊಡಗುತ್ತಾಳೆ. ಸಾಂಪ್ರದಾಯಿಕ ಹಿನ್ನೆಲೆಯ ಪುರಾಣ ಜನ್ಯ ಮನಸ್ಥಿತಿಯ ಕಸ್ತೂರಬಾ ಇಂದಿನ ಸಂದರ್ಭದಲ್ಲಿ ಒಬ್ಬ ಕ್ರಾಂತಿಕಾರಿ ಮಹಿಳೆಯಾಗಿ ಕಂಡುಬರುತ್ತಾರೆ. 'ಕಸ್ತೂರಬಾ' ಪಾತ್ರವನ್ನು ಅರಿಯುವ ಪ್ರಯತ್ನಕ್ಕೆ ಒಡ್ಡಿಕೊಳ್ಳುವ

ನಟಿ, 'ಹೊಂದಾಣಿಕೆಯ ಬದುಕು ಸಹ್ಯ ಬದುಕು' ಎಂಬ ತಿಳಿವಳಿಕೆ ಪಡೆಯುತ್ತಾ 'ಕಳೆದುಕೊಳ್ಳುತ್ತಾ ಹೋದಂತೆ ಬದುಕು ಕೂಡುತ್ತಾ ಹೋಗುತ್ತದೆ' ಎಂಬುದರ ಬಗ್ಗೆ ಯೋಚಿಸತೊಡಗುತ್ತಾಳೆ.

ಒಂದು ಉದ್ದೇಶಕ್ಕಾಗಿ ನಾನು ಏಕವ್ಯಕ್ತಿ ನಾಟಕವನ್ನು ಅಭಿನಯಿಸಲು ಪ್ರಾರಂಭಿಸಿದೆ. ಇದು ನನಗೆ ಬದುಕಿನಲ್ಲಿ ಆತ್ಮವಿಶ್ವಾಸ, ನಂಬಿಕೆ ಮತ್ತು ಸಕಾರಾತ್ಮಕ ನಿಲುವನ್ನು ತಂದುಕೊಟ್ಟಿದೆ. ನನ್ನ ನೆನಪಿನ ಮರಕ್ಕೆ ನೀರೆರೆಯುವಲ್ಲಿ ನೆರವಾಗುತ್ತಿರುವ ಎಲ್ಲರ ವಿಶ್ವಾಸ, ಸ್ನೇಹ, ಪ್ರೀತಿಗೆ ನಾನು ಎಂದೆಂದೂ ಆಭಾರಿ. ■



ಕಸ್ತೂರಬಾ ಏಕವ್ಯಕ್ತಿ ಪ್ರದರ್ಶನದ ಒಂದು ದೃಶ್ಯ



ಕಸ್ತೂರಬಾ ಪಾತ್ರದಲ್ಲಿ ತಲ್ಲೀನವಾಗಿರುವ ಕಲಾವಿದೆ ಬಿ ಎಸ್ ಶಶಿಕಲಾ



ದಾಂಡಿ ನಡಿಗೆ ಉಪ್ಪಿನ ಸತ್ಯಾಗ್ರಹದ ಕಿರು ಸಾಕ್ಷ್ಯಚಿತ್ರವನ್ನು ಯು ಟ್ಯೂಬ್ ನಲ್ಲಿ ಈ ಕ್ಯೂ ಆರ್ ಕೋಡ್ ಮೂಲಕ ವೀಕ್ಷಿಸಿ

ದಾಂಡಿ ನಡಿಗೆ ಉಪ್ಪಿನ ಸತ್ಯಾಗ್ರಹ

ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಉಪ್ಪಿನ ಮೇಲೆ ಆಂಗ್ಲರು ವಿಧಿಸಿದ್ದ ಕರವನ್ನು ವಿರೋಧಿಸಿ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನೇತಾರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು 78 ಜನ ಸತ್ಯಾಗ್ರಹಿಗಳೊಂದಿಗೆ ಗುಜರಾತ್ ಅಹಮದಾಬಾದ್ ಸಾಬರಮತಿ ಆಶ್ರಮದಿಂದ 1930 ರ ಮಾರ್ಚ್ 12 ರಂದು ಬೆಳಿಗ್ಗೆ 6:30ಕ್ಕೆ ಅಹಿಂಸಾತ್ಮಕ ಆಂದೋಲನ ಉಪ್ಪಿನ ಸತ್ಯಾಗ್ರಹ ದಂಡಿಯಾತ್ರೆಯನ್ನು ಆರಂಭ ಮಾಡಿದರು.

ಭಾರತದ ವಿವಿಧ ಪ್ರಾಂತ್ಯದಿಂದ ಬಂದಿದ್ದ 78 ಜನ ಸತ್ಯಾಗ್ರಹಿಗಳಲ್ಲಿ 16 ವರ್ಷದ ವಿಠಲ್ ಲೀಲಾಧರ್ ಥಕ್ಕರ್ ಕಿರಿಯ ಸತ್ಯಾಗ್ರಹಿ ಆಗಿದ್ದರೇ, 61 ವರ್ಷದ ಬಾಪೂ ಹಿರಿಯ ಸತ್ಯಾಗ್ರಹಿ ಆಗಿದ್ದರು.

ಹೆಮ್ಮೆ : ಈ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದ 78 ಜನ ಸತ್ಯಾಗ್ರಹಿಗಳಲ್ಲಿ ಕರ್ನಾಟಕದ ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನ 18 ವರ್ಷದ ತರುಣ ಮೈಲಾರ ಮಹಾದೇವಪ್ಪ ಮಹಾತ್ಮನ ಜೊತೆಗಿದ್ದರು ಇದು ನಮಗೊಂದು ಹೆಮ್ಮೆ.

ಎಷ್ಟು ದೂರ : ಸಾಬರಮತಿಯಿಂದ 241 ಮೈಲು ದೂರವಿರುವ (390 ಕಿಮೀ) ದಂಡಿ ಸಮುದ್ರ ತೀರವನ್ನು (ಪ್ರತಿದಿನ 10 ಮೈಲು) 24 ದಿನ ನಡೆದು ಏಪ್ರಿಲ್ 05 ರ ಸಂಜೆ ದಂಡಿ ಸಮುದ್ರ ತೀರವನ್ನು ತಲುಪಿದರು.ಈ ನಡುವೆ 3 ಸಾವಿರ ಸತ್ಯಾಗ್ರಹಿಗಳೊಂದಿಗೆ ಆಗಮಿಸಿದ ಸರೋಜಿನಿ ನಾಯ್ಡು ನವಸಾರಿಯಲ್ಲಿ ಗಾಂಧಿಯೊಂದಿಗೆ ಸೇರಿಕೊಂಡರು ಜೊತೆಗೆ ಕಸ್ತೂರಬಾ ಅವರೂ ಇದ್ದರು.

ಟ್ಯಾಗೋರ್ ಪತ್ರ : ರಾಮದಾಸ್, ದೇವದಾಸ್ ಜೊತೆಗೆ ಕಸ್ತೂರ್ ಬಾ ಹಾಗೂ ಶ್ರೀಮತಿ ಸರೋಜಿನಿ ನಾಯ್ಡು ಅವರನ್ನು ಆಂಗ್ಲರು ಬಂಧಿಸಿದರು. ಬಂಧನದ ಸಮಯದಲ್ಲಿ ಬ್ರಿಟಿಷರು ಮಹಿಳಾ ಸತ್ಯಾಗ್ರಹಿಗಳ ಮೇಲೆ ಸ್ವಲ್ಪ ಕಟುವಾಗಿ ನಡೆದುಕೊಂಡರು ಎನ್ನುವ ಸುದ್ದಿ ಜನರಲ್ಲಿ ಹಬ್ಬಿತು . ಈ ಸುದ್ದಿ ತಿಳಿದ ಗುರುದೇವ ರವೀಂದ್ರ ನಾಥ ಟ್ಯಾಗೋರ್ ರು ಬ್ರಿಟಿಷ್ ಸರ್ಕಾರಕ್ಕೆ ಕಟುವಾಗಿ ಪತ್ರ ಬರೆದು ಅವರ ನಡೆಯನ್ನು ಟೀಕಿಸಿದರು.

ಉಪ್ಪಿನಸತ್ಯಾಗ್ರಹಕ್ಕೆ ತಡೆ : 1930ರ ಏಪ್ರಿಲ್ 06ರ ಬೆಳಿಗ್ಗೆ 04:30ಕ್ಕೆ ಎದ್ದು ಸರ್ವಧರ್ಮ ಪ್ರಾರ್ಥನೆ ಸಲ್ಲಿಸಿ 8:12 ನಿಮಿಷಕ್ಕೆ ಸಮುದ್ರ ತಟಕ್ಕೆ ಇಳಿದು ಮಣ್ಣು ಮಿಶ್ರಿತ ಹಿಡಿ ಉಪ್ಪನ್ನು ಹಿಡಿದು ಆಂಗ್ಲರು ಹೇರಿದ್ದ ಉಪ್ಪಿನ ತೆರಿಗೆಯನ್ನು ವಿರೋಧಿಸಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಗಾಂಧಿ ಸವಾಲೆಸೆದರು.

ಆ ಸಂದರ್ಭದಲ್ಲಿ ದಂಡಿ ತೀರದಲ್ಲಿ ಅಂದಾಜು ಐದೂವರೆ ಲಕ್ಷ ಜನರು ಸೇರಿದ್ದರು. ಇದಾದ ಬಳಿಕ ಉಪ್ಪು ತಯಾರಿಸುವ ಚಳವಳಿ ರಾಷ್ಟ್ರಾದ್ಯಂತ ಹಬ್ಬಿ ಹೆಚ್ಚಿನ ಕಾವು ಪಡೆಯಿತು.

ಜಗತ್ ಪ್ರಸಿದ್ಧವಾದ ಉಪ್ಪಿನ ಚಳವಳಿಯ ಸಂದರ್ಭದಲ್ಲಿ ಒಂದು ಲಕ್ಷ 12 ಸಾವಿರ ಜನ ಸತ್ಯಾಗ್ರಹಿಗಳನ್ನು ಸರ್ಕಾರ ಬಂಧನ ಮಾಡಿತು ಎಂದು ಪ್ರಪಂಚದ ಪತ್ರಕರ್ತರು ಮತ್ತು ಇತಿಹಾಸಕಾರರು ದಾಖಲು ಮಾಡಿದ್ದಾರೆ .


ಗಾಂಧಿ ಬಂಧನ : ದೇಶವ್ಯಾಪಿ ಸತ್ಯಾಗ್ರಹಿಗಳನ್ನು ಬಂಧಿಸುವಲ್ಲಿ ನಿರತರಾದ ಬ್ರಿಟಿಷರು ಮಹಾತ್ಮ ಗಾಂಧಿಯನ್ನು ಬಂಧಿಸುವ ಯೋಜನೆ ಮಾಡಿದರು. 1930 ರ ಮೇ 04 ರ ನಡುರಾತ್ರಿ 12 ಗಂಟೆ 45 ನಿಮಿಷಕ್ಕೆ (ಇನ್ನೊಂದು ಮೂಲದ ಪ್ರಕಾರ 01ಗಂಟೆ 10ನಿಮಿಷ) ಕರಾಡಿಯ ಜೋಪಡಿಗೆ (ದಂಡಿಯಿಂದ 4 ಮೈಲು ದೂರವಿರುವ ಹಳ್ಳಿ) ನುಗ್ಗಿದ ಪೊಲೀಸರು ಮಬ್ಬುಗತ್ತಲಿನಲ್ಲಿ ಕಂದೀಲು ಕೆಳಗೆ ಮಲಗಿದ್ದ ಗಾಂಧಿಯನ್ನು ಬಂಧಿಸುತ್ತಾರೆ . ಆ ಕತ್ತಲ ರಾತ್ರಿಯಲ್ಲಿಯೇ ಸರಕು ಸಾಗಣೆಯ ಗೂಡ್ಸ್ ರೈಲಿನಲ್ಲಿ ನವಸಾರಿಯಿಂದ ಬಾಂಬೆಗೆ, ಅಲ್ಲಿಂದ ಪುಣೆಯ ಜೈಲಿಗೆ ಕರೆ ತಂದರು. ಅಂದು ಬಾಪೂವನ್ನು ಬಂಧಿಸಿ ಕೂಡ್ರಿಸಿದ್ದ ಅದೇ ಸ್ಥಳದಲ್ಲಿ ಇಂದು ರೈಲು ನಿಲ್ದಾಣವೊಂದನ್ನು ನಿರ್ಮಿಸಿ **'ಗಾಂಧಿ ಸ್ಮೃತಿ ರೈಲು ನಿಲ್ದಾಣ'** ಎಂದು ಹೆಸರಿಡಲಾಗಿದೆ.

ಸ್ಫೂರ್ತಿ – ಪ್ರಶಂಸೆ : ಉಪ್ಪಿನ ಸತ್ಯಾಗ್ರಹ ಜಗತ್ತಿನ ಅನೇಕ ಅನೇಕ ಹೋರಾಟಗಳಿಗೆ, ಅಮೇರಿಕಾದ ಕಪ್ಪು ಜನರ ನಾಯಕ ಡಾ.ಮಾರ್ಟಿನ್ ಲೂಥರ್ ಕಿಂಗ್ ಜ್ಯುನಿಯರ್, ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ, ಬರ್ಮಾದ ಅಂಗ್ ಸ್ಯಾನ್ ಸೂಕಿ, ವೆಲೆಸಾ, ಹಾವೇಲ್ ಹೀಗೆ ನೂರಾರು ನಾಯಕರುಗಳಿಗೆ ಸ್ಫೂರ್ತಿಯಾಯಿತು . ನೊಬೆಲ್ ವಿಜೇತರಾದ ಫ್ರೆಂಚ್ ನಾಟಕಕಾರ ಹಾಗೂ ಕಾದಂಬರಿಕಾರ ರೋಮಾ ರೋಲಾ, ಜಗತ್ ಪ್ರಸಿದ್ಧ ಲೇಖಕ ಮತ್ತು ಪತ್ರಕರ್ತ ಅಮೆರಿಕೆಯ ಲೂಯಿಸ್ ಫಿಶರ್,

ಹಿರಿಯ ಸ್ವಾತಂತ್ರ್ಯ ಸೇನಾನಿ ಮೋತಿಲಾಲ್ ನೆಹರೂ, ರಾಷ್ಟ್ರಪಿತನ ಮಾನಸ ಪುತ್ರ ನೇತಾಜಿ ಬೋಸ್ ಸೇರಿದಂತೆ ಇನ್ನೂ ಅನೇಕ ನೇತಾರರು ಮಹಾತ್ಮರು ನಡೆಸಿದ ಉಪ್ಪಿನ ಸತ್ಯಾಗ್ರಹದ ಬಗ್ಗೆ ಹೆಮ್ಮೆಯ ಮಾತುಗಳನ್ನಾಡಿ ಪ್ರಶಂಸಿದರು.

ಸಂಗ್ರಹ : ನೇತಾಜಿ ಗಾಂಧಿ

ಚಿ|ತ್ರಾ|ವ|ಳಿ





ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಕಾನೂನು ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಿಗೆ ತರಬೇತಿ . ಕರ್ನಾಟಕ ಲೋಕಾಯುಕ್ತರಾದ ಶ್ರೀ ಬಿ ಎಸ್ ಪಾಟೀಲ್, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಉಪಕುಲಪತಿ ಡಾ . ಸಿ ಬಸವರಾಜು , ಗ್ರಾಮೀಣ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಸುರೇಶ್ ನಾಡಗೌಡರ್, ಡಾ. ಕೆ ಎಂ ವೀರಯ್ಯ, ಗಾಂಧಿ ಸ್ಮಾರಕ ನಿಧಿಯ ನಿರ್ದೇಶಕರಾದ ಪ್ರೊ . ಜಿ ಬಿ ಶಿವರಾಜ್ ಇವರುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು .

ದಿನಾಂಕ 9.3.2025 ರಿಂದ 15.3.2025 ರವರೆಗೆ ಕಡಿದಾಳ್ ಗ್ರಾಮದಲ್ಲಿ ನಡೆದ ಗಾಂಧಿ ತತ್ವ ಪ್ರಣೀತ ರಾಜ್ಯ ಮಟ್ಟದ ಯುವಜನ ಶಿಬಿರ ಮತ್ತು ಗಾಂಧಿ ಅನುಯಾಯಿ, ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳ ಮಂಜಪ್ಪ ಸಂಸ್ಮರಣೆ ಕಾರ್ಯಕ್ರಮದ ಚಿತ್ರಗಳು.


ಮಾಜಿ ಸಚಿವರುಗಳಾದ ಕಿಮ್ಮನೆ ರತ್ನಾಕರ್, ಆರಗ ಜ್ಞಾನೇಂದ್ರ, ಬಿ ಎಲ್ ಶಂಕರ್, ಮಾಜಿ ಶಾಸಕರು ಹಾಗೂ ಗಾಂಧಿ ಚಿಂತಕರಾದ ಡಿ ಆರ್ ಪಾಟೀಲ್ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ , ಕಾರ್ಯದರ್ಶಿ ಎಂ ಸಿ ನರೇಂದ್ರ, ನಿರ್ದೇಶಕರಾದ ಪ್ರೊ ಜಿ ಬಿ ಶಿವರಾಜ್, ಸದಸ್ಯರಾದ ಸವಿತಾ ನಾಗಭೂಷಣ್ ಹಾಗೂ ಕಡಿದಾಳ್ ಮಂಜಪ್ಪನವರ ಪುತ್ರಿ ಶ್ರೀಕಲಾ ಕಡಿದಾಳ್, ಮತ್ತು ಸ್ಥಳೀಯ ಪ್ರಮುಖರುಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು .






ರಾಷ್ಟ್ರೀಯ ಸೇವಾ ಯೋಜನೆ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ
ಹಾಗೂ
ಮಹಾವಿದ್ಯಾಲಯ, ತೀರ್ಥಹಳ್ಳಿ
ಗ್ರಾಮ ಪಂಚಾಯಿತಿ, ತೀರ್ಥಹಳ್ಳಿ ತಾ
ಮಟ್ಟದ ಯುವಜನ ಶಿಬಿರ
ಮತ್ತು
ಮಾಜಿ ಮುಖ್ಯಮಂತ್ರಿ
ಮಂಜಪ್ಪ






ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.

ಗಾಂಧೀಜಿ ಬರೆದ 124 ವೈವಿಧ್ಯಮಯ ಬರಹಗಳು ಹಾಗೂ 150 ಹೇಳಿಕೆಗಳನ್ನು ಒಳಗೊಂಡ 400 ಪುಟಗಳ ಪುಸ್ತಕ ಇದು. ಗಾಂಧೀ ಚಿಂತನೆಯ ಅಪೂರ್ವ ಮಿಂಚು, ಆಳ, ಗಾಂಭೀರ್ಯಗಳನ್ನು ಬಿಂಬಿಸುವ ಈ ಕನ್ನಡಾನುವಾದಗಳನ್ನು 'ಬಾಪೂ ಚಿಂತನೆ' ಪ್ರತಿ ತಿಂಗಳು ಪ್ರಕಟಿಸುತ್ತದೆ.

ದೇಶದ್ರೋಹ ಕೋರ್ಟಿನಲ್ಲಿ ಗಾಂಧೀಜಿಯವರ ಚಾರಿತ್ರಿಕ ಹೇಳಿಕೆ

– ನಟರಾಜ್ ಹುಳಿಯಾರ್



ಎಂ.ಕೆ. ಗಾಂಧಿ. ವಯಸ್ಸು 52, ವೃತ್ತಿಯಿಂದ ರೈತ ಮತ್ತು ನೇಕಾರ . ವಾಸ : ಸತ್ಯಾಗ್ರಹ ಆಶ್ರಮ, ಸಬರಮತಿ, ಅಹ್ಮದಾಬಾದ್.

ಬಾಂಬೆ ಘಟನಾವಳಿಗಳು, ಮದ್ರಾಸ್ ಘಟನಾವಳಿಗಳು ಹಾಗೂ ಚೌರಿಚೌರಾದ ಘಟನಾವಳಿಗಳಿಗೆ ಸಂಬಂದಿಸಿದಂತೆ ಲೆಫ್ಟಿನೆಂಟ್ ಜನರಲ್ ಅವರು ನನ್ನ ಹೆಗಲ ಮೇಲೆ ಹೊರಿಸಿರುವ ಎಲ್ಲ ತಪ್ಪುಗಳನ್ನೂ ನಾನು ಅನುಮೋದಿಸುತ್ತೇನೆ. ನಮ್ಮ ಜನ ಕೆಲವು ಸಲ ಹುಚ್ಚರಂತೆ ವರ್ತಿಸಿದ್ದಾರೆಂದು ನಾನು ಬಲ್ಲೆ. ಈ ಕುರಿತು ಹೃದಯಾಂತರಾಳದಿಂದ ಕ್ಷಮೆ ಯಾಚಿಸುತ್ತೇನೆ; ಆ ಕಾರಣಕ್ಕಾಗಿ ನನಗೆ ಹಗುರವಾದ ಶಿಕ್ಷೆ ನೀಡದೆ ಅತ್ಯಂತ ಉಗ್ರ ಶಿಕ್ಷೆಯನ್ನೇ ನೀಡಬೇಕೆಂದು ಮನವಿ ಮಾಡುತ್ತೇನೆ...ಯಾವುದು ನನ್ನ ದೃಷ್ಟಿಯಲ್ಲಿ ನಾಗರಿಕನೊಬ್ಬನ ಅತಿ ಮಹತ್ವದ ಕರ್ತವ್ಯವಾಗಿದೆಯೋ ಅಂಥ ಕೆಲಸ ಮಾಡಿದ್ದಕ್ಕಾಗಿ ಅತ್ಯಂತ ಉಗ್ರ ಶಿಕ್ಷೆಯನ್ನು ನನಗೆ ನೀಡಬೇಕೆಂದು ಕೋರಲು ಹಾಗೂ ಅದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೇನೆಂದು ಹೇಳಲು ನಾನಿಲ್ಲಿ ನಿಂತಿದ್ದೇನೆ.

ನಾನು ನನ್ನ ಹೇಳಿಕೆಯಲ್ಲಿ ಮಂಡಿಸಲಿರುವಂತೆ , ನ್ಯಾಯಾಧೀಶರಾದ ತಾವು ಯಾವ ವ್ಯವಸ್ಥೆಯ ನೆರವಿಗೆ ನಿಂತಿದ್ದೀರೋ ಆ ವ್ಯವಸ್ಥೆಯ ಕಾನೂನುಗಳು ಜನರ ಒಳಿತಿಗಾಗಿಯೇ ಇವೆಯೆಂದು ನೀವು ನಂಬಿದ್ದರೆ, ತಮ್ಮೆದುರು ಇರುವ ಆಯ್ಕೆಗಳು ಎರಡೇ : ನಿಮ್ಮ ಹುದ್ದೆಗೆ ರಾಜಿನಾಮೆ ನೀಡುವುದು, ಅಥವಾ ನನಗೆ ಅತ್ಯಂತ ಉಗ್ರ ಶಿಕ್ಷೆ ವಿಧಿಸುವುದು. ನಿಮ್ಮಿಂದ ಅಂಥ ಮನಃಪರಿವರ್ತನೆಯನ್ನು ನಾನು ನಿರೀಕ್ಷಿಸುವುದಿಲ್ಲ. ಆದರೆ ನನ್ನ ಹೇಳಿಕೆ ಮುಗಿಯುವುದರೊಳಗೆ ನನ್ನ ಮನಸಿನಲ್ಲಿ ಕುದಿಯುತ್ತಿರುವ ರೋಷದ ಬಗ್ಗೆ, ತಲೆ ಸರಿಯಿರುವ ಮನುಷ್ಯನೊಬ್ಬ ಇಂಥ ಹುಚ್ಚಾಟದಂಥ ಅಪಾಯವನ್ನು ಯಾಕೆ ತಾನೇ ಆಹ್ವಾನಿಸಿಕೊಂಡ ಎಂಬುದರ ಬಗ್ಗೆ ನಿಮಗೆ ಒಂದು ಹೊಳಹು ಕಾಣಬಲ್ಲದು...ಇಂಡಿಯಾದಲ್ಲಿ ಕಾನೂನಿನ ಪ್ರಕಾರ




ಸ್ಥಾಪಿಸಲ್ಪಟ್ಟ ಸರ್ಕಾರದ ವಿರುದ್ಧ ರಾಜಕೀಯ ಅವಿಶ್ವಾಸ, ಅಸಹನೆಗಳನ್ನು ನಾನು ಬಿತ್ತುತ್ತಿದ್ದೇನೆ ಎಂಬ ಆಪಾದನೆಯ ಸಂಬಂಧದಲ್ಲೂ ನಾನು ತಪ್ಪಿತಸ್ಥ ಎಂಬುದನ್ನು ಈ ನ್ಯಾಯಾಲಯಕ್ಕೂ ಹೇಳಬೇಕಾದದ್ದು ನನ್ನ ಕರ್ತವ್ಯವಾಗಿದೆ.

...ಜನರ ಎಲ್ಲ ಬಗೆಯ ಅಸಲಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ರೌಲತ್ ಕಾಯ್ದೆಯ ಮೂಲಕ ಮೊದಲ ಆಘಾತ ನಮ್ಮ ಮೇಲೆ ಬಂದೆರಗಿತು. ಈ ಕಾಯ್ದೆಯ ವಿರುದ್ಧ ತೀವ್ರ ಆಂದೋಲನವನ್ನು ಮುನ್ನಡೆಸಬೇಕೆಂಬ ಪ್ರೇರಣೆ ನಮ್ಮಲ್ಲಿ ಹುಟ್ಟಿತು. ಈ ಕಾಯ್ದೆಯ ಬೆನ್ನಿಗೇ ಪಂಜಾಬಿನ ಭೀಕರ ಘಟನೆಗಳು ಶುರುವಾದವು. ಜಲಿಯನ್‌ವಾಲಾಬಾಗ್‌ನ ಬರ್ಬರ ಹತ್ಯೆಗಳಿಂದ ಶುರುವಾದ ಈ ಭೀಕರ ಘಟನೆಗಳು ಸಾರ್ವಜನಿಕರ ಅವಹೇಳನ, ಜನರನ್ನು ಸಾರ್ವಜನಿಕವಾಗಿ ಥಳಿಸುವುದು ಮುಂತಾದ ಹಲಬಗೆಯ ಭೀಕರ ದಮನಗಳವರೆಗೂ ಮುಂದುವರಿದವು. ಅದೇ ವೇಳೆಗೆ, ಟರ್ಕಿ ಹಾಗೂ ಇಸ್ಲಾಮ್‌ನ ಪವಿತ್ರ ಕ್ಷೇತ್ರಗಳ ರಕ್ಷಣೆ ಕುರಿತಂತೆ ಪ್ರಧಾನ ಮಂತ್ರಿಗಳು ನೀಡಿದ್ದ ವಚನಬದ್ಧ ಭರವಸೆ ಪೂರೈಸುವ ಸಾಧ್ಯತೆ ಇಲ್ಲ ಎಂಬುದೂ ತಿಳಿಯಿತು. ಆದರೂ 1919ರ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿ ಗೆಳೆಯರ ಭವಿಷ್ಯವಾಣಿ ಹಾಗೂ ಗಂಭೀರ ಎಚ್ಚರಿಕೆಗಳನ್ನು ಕಡೆಗಣಿಸಿ ನಾನು 'ಮಾಂಟಗು–ಚೆಮ್ ಮೊರ್ಡ್ಸ್ ' ಸುಧಾರಣೆಗಳ ಪರವಾಗಿ ನಿಂತು, ಈ ನಿಟ್ಟಿನಲ್ಲಿ ಭಾರತೀಯರು ಸರ್ಕಾರಕ್ಕೆ ಸಹಕಾರ ಕೊಡುವಂತೆ ಮಾಡಿದೆ. ಈ ಎಲ್ಲ ಸಹಕಾರ ಕೊಡಲು ಮುಖ್ಯ ಕಾರಣವೆಂದರೆ, ಬ್ರಿಟಿಷ್ ಪ್ರಧಾನಮಂತ್ರಿಗಳು ಇಂಡಿಯಾದ ಮುಸ್ಲಿಮರಿಗೆ ಕೊಟ್ಟ ಮಾತನ್ನು ನಡೆಸಿಕೊಡುವರು; ಪಂಜಾಬಿನ ಘಟನೆಗಳಿಂದ ಉಂಟಾದ ಗಾಯಗಳು ಮಾಯುವುವು; ಹಾಗೂ ಸುಧಾರಣೆಗಳು– ಅವು ಎಷ್ಟೇ ಅರೆಬರೆಯಾಗಿದ್ದರೂ, ತೃಪ್ತಿದಾಯಕವಾಗಿಲ್ಲದಿದ್ದರೂ ಪರವಾಗಿಲ್ಲ– ಇಂಡಿಯಾದ ಬದುಕಿನಲ್ಲಿ ಹೊಸ ಯುಗವೊಂದಕ್ಕೆ ನಾಂದಿ ಹಾಡುವುವು ಎಂಬ ಭರವಸೆ.

ಆದರೆ ಈ ಎಲ್ಲ ಆಸೆ, ಭರವಸೆಗಳೂ ಮುರಿದು ಬಿದ್ದವು. ಖಿಲಾಫತ್ ಆಶ್ವಾಸನೆ ಈಡೇರಲಿಲ್ಲ. ಪಂಜಾಬ್ ಅಪರಾಧಗಳಲ್ಲಿ ಭಾಗಿಯಾದವರ ವಿಚಾರಣೆ ತಿಪ್ಪೆ ಸಾರಿಸಿದಂತಿತ್ತು. ಬಹುತೇಕ ಅಪರಾಧಿಗಳಿಗೆ ಶಿಕ್ಷೆಯಾಗಲೇ ಇಲ್ಲ; ಕೆಲವರು ಸರ್ಕಾರಿ ಸೇವೆಯಲ್ಲೇ ಮುಂದುವರಿದರು. ಇನ್ನು ಕೆಲವರು ಇಂಡಿಯಾದ ಆದಾಯದಿಂದಲೇ ತಮ್ಮ ಪಿಂಚಣಿಯನ್ನೂ ಪಡೆದರು. ಕೆಲವರಿಗೆ ಬಿರುದು, ಬಹುಮಾನಗಳೂ ಸಿಕ್ಕವು. ಪ್ರಧಾನಮಂತ್ರಿಗಳು ಹೇಳಿದ ಸುಧಾರಣೆಗಳು ಹೃದಯ ಪರಿವರ್ತನೆಯನ್ನೂ ಮಾಡಲಿಲ್ಲ. ಈ ಸುಧಾರಣೆಗಳು ಭಾರತದ ಸಂಪತ್ತನ್ನು ಮತ್ತಷ್ಟು ಹೀರುವ ಹಾಗೂ ಭಾರತದ ದಾಸ್ಯವನ್ನು ಇನ್ನಷ್ಟು ಮುಂದೂಡುವ ಸಾಧನೆಗಳೆಂಬುದು ನನ್ನ ಅರಿವಿಗೆ ಬರತೊಡಗಿತು.

ಆ ಘಟ್ಟದಲ್ಲಿ ನನಗೆ ಸ್ಪಷ್ಟವಾಗಿ ಹೀಗೆನ್ನಿಸಿತು: ಬ್ರಿಟಿಷ್ ಸಂಬಂಧ ಭಾರತವನ್ನು ಹಿಂದೆಂದಿಗಿಂತಲೂ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಅಸಹಾಯಕವಾಗಿಸಿದೆ. ನಿಶ್ಶಸ್ತ್ರ ಭಾರತ ಯಾವುದೇ ದಾಳಿಕೋರನ ವಿರುದ್ಧ ಅಸ್ತ್ರಗಳನ್ನು ಬಳಸಿ ಹೋರಾಡಬಯಸಿದರೂ ಅದರ ಬಳಿ ಪ್ರತಿಭಟನೆಯ ಶಕ್ತಿಯೇ ಉಳಿದಿಲ್ಲ. ಇಂಡಿಯಾಕ್ಕೆ ಸ್ವಾತಂತ್ರ್ಯ ಸಿಗಬೇಕೆಂದರೆ ಇನ್ನೂ ತಲೆಮಾರುಗಳು ಬೇಕಾಗುತ್ತದೆ ಎಂಬುದನ್ನು ನಮ್ಮ ಬಹು ದೊಡ್ಡ ವಿದ್ವಾಂಸರು ಕೂಡ ಮನಗಂಡಿರುವರು. ಇಂಡಿಯಾ ಎಷ್ಟು ಬಡವಾಗಿದೆಯೆದರೆ ಬರಗಾಲಗಳನ್ನು ಎದುರಿಸಲು ಅದಕ್ಕೆ ಶಕ್ತಿಯೇ ಉಳಿದಿಲ್ಲ. ಬ್ರಿಟಿಷರು ಬರುವುದಕ್ಕೆ ಮುನ್ನ ಲಕ್ಷಾಂತರ ಗುಡಿಸಲುಗಳಲ್ಲಿ ಜನ ನೂಲು ತೆಗೆಯುತ್ತಿದ್ದರು, ನೇಯುತ್ತಿದ್ದರು; ಇಂಡಿಯಾದಲ್ಲಿ ಕೃಷಿಯಿಂದ ಬರುತ್ತಿದ್ದ ಅಲ್ಪ ವರಮಾನದ ಜೊತೆಗೆ ಈ ದುಡಿಮೆ ಅಗತ್ಯವಾಗಿತ್ತು. ಇಂಡಿಯಾದ ಅಸ್ತಿತ್ವಕ್ಕೆ ಅತ್ಯಂತ ಮುಖ್ಯವಾಗಿದ್ದ ಈ ಗುಡಿ ಕೈಗಾರಿಕೆಯನ್ನು ನಿರ್ದಯವಾದ, ಅಮಾನವೀಯವಾದ ಯೋಜನೆಗಳಿಂದ ನಾಶ ಮಾಡಲಾಗಿದೆ. ಇದನ್ನು ಕಣ್ಣಾರೆ ಕಂಡ ಇಂಗ್ಲಿಷ್ ಲೇಖಕರೇ ಈ ಬಗ್ಗೆ ಬರೆದಿದ್ದಾರೆ .

ಅರೆಹೊಟ್ಟೆಯ ಭಾರತೀಯ ಸಮುದಾಯ ನಿಧಾನಕ್ಕೆ ಹೇಗೆ ನಿರ್ಜೀವವಾಗುತ್ತಾ ಬಸವಳಿದಿದೆಯೆಂಬುದು ನಗರವಾಸಿಗಳಿಗೆ ಗೊತ್ತೇ ಇಲ್ಲ. ವಿದೇಶಿ ಸುಲಿಗೆಕೋರನಿಗಾಗಿ ತಾವು ಮಾಡುತ್ತಿರುವ ಕೆಲಸಕ್ಕಾಗಿ ಪಡೆಯುತ್ತಿರುವ ದಳ್ಳಾಳಿ ಹಣದ ಮೂಲಕ ತಾವು ತಮ್ಮ ಶೋಚನೀಯ ಸವಲತ್ತನ್ನು ಪಡೆಯುತ್ತಿರುವುದು ಕೂಡ ಈ ನಗರವಾಸಿಗಳಿಗೆ ತಿಳಿದಂತಿಲ್ಲ; ಈ ದಲ್ಲಾಳಿ ಹಣವೂ, ವಿದೇಶಿ ಸುಲಿಗೆಕೋರನ ಲಾಭವೂ ಜನಸಮುದಾಯವನ್ನು ಹೀರಿ ಪಡೆದದ್ದು ಎಂಬುದು ಕೂಡ



ನಗರವಾಸಿಗಳಿಗೆ ತಿಳಿದಿಲ್ಲ. ಜನಸಮುದಾಯವನ್ನು ಈ ಬಗೆಯಲ್ಲಿ ಶೋಷಿಸುವ ಸಲುವಾಗಿಯೇ ಬ್ರಿಟಿಷ್ ಇಂಡಿಯಾದಲ್ಲಿ ಕಾನೂನುಬದ್ಧವಾಗಿ ಸ್ಥಾಪಿಸಲಾದ ಸರ್ಕಾರವನ್ನು ನಡೆಸಿಕೊಂಡು ಹೋಗಲಾಗುತ್ತಿದೆ ಎಂಬುದನ್ನು ಕೂಡ ನಗರವಾಸಿಗಳು ಅರಿತಿಲ್ಲ. ಯಾವ ಅಂಕಿ ಅಂಶಗಳ ನಾಜೂಕು ಮಂಡನೆಗಳೂ, ಶಬ್ದಾಡಂಬರಗಳೂ ನಮ್ಮ ಲಕ್ಷಾಂತರ ಹಳ್ಳಿಗಳಲ್ಲಿರುವ ಅಸ್ಥಿಪಂಜರಗಳು ನಮ್ಮ ಕಣ್ಣೆದುರು ಒಡ್ಡುತ್ತಿರುವ ಸಾಕ್ಷ್ಯವನ್ನು ಅಲ್ಲಗಳೆಯಲಾರವು.

ಮಾನವಕುಲಕ್ಕೆ ಎಸಗಿದ ಇಂಥ ಅಪರಾಧ ಪ್ರಾಯಶಃ ಮಾನವ ಇತಿಹಾಸದಲ್ಲಿ ಹಿಂದೆಂದೂ ಕಾಣದಂಥದು. ವಿದೇಶಿ ಶೋಷಕನ ಸೇವೆಗೆ ಅನುಕೂಲವಾಗುವಂತೆ ಈ ದೇಶದ ಕಾನೂನನ್ನೇ ಬಳಸಲಾಗಿದೆ. ಪಂಜಾಬ್ ಮಾರ್ಷಲ್ ಲಾಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ಪೂರ್ವಗ್ರಹಗಳಿಲ್ಲದೆ ನಾನು ಮಾಡಿದ ವಿಚಾರಣೆಯ ಪ್ರಕಾರ, ಕೊನೆಯ ಪಕ್ಷ ಶೇಕಡ ತೊಂಬತ್ತೊಂಬರಷ್ಟು ಶಿಕ್ಷೆಗಳು ಸಂಪೂರ್ಣವಾಗಿ ಅನ್ಯಾಯದ ಶಿಕ್ಷೆಗಳು. ರಾಜಕೀಯ ಪ್ರಕರಣಗಳನ್ನು ಕುರಿತ ನನ್ನ ಅನುಭವವು ಈ ದೇಶದಲ್ಲಿ ಶಿಕ್ಷೆಗೊಳಗಾಗುವ ಹತ್ತರಲ್ಲಿ ಒಂಬತ್ತು ಜನ ಸಂಪೂರ್ಣ ಮುಗ್ಧರು ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ. ಈ ಜನರ 'ಅಪರಾಧ'ದ ಹಿನ್ನೆಲೆಯಲ್ಲಿ ದೇಶ ಕುರಿತ ಪ್ರೀತಿಯಷ್ಟೇ ತುಂಬಿದೆ.

ಇಂಡಿಯಾದ ಕೋರ್ಟುಗಳಲ್ಲಿ 100ರಲ್ಲಿ 99ರಷ್ಟು ಪ್ರಕರಣಗಳಲ್ಲಿ ಭಾರತೀಯರಿಗೆ ನ್ಯಾಯವನ್ನು ನಿರಾಕರಿಸಲಾಗಿದೆ. ಇದು ಉತ್ಪ್ರೇಕ್ಷೆಯಲ್ಲ . ಹೀಗೆ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಶೋಷಕರಿಗೆ ಅನುಕೂಲವಾಗುವಂತೆ ಕಾನೂನು ಪರಿಪಾಲನೆಯ ವೇಶ್ಯಾವಾಟಿಕೆ ನಡೆದಿದೆ ಎಂಬುದು ನನ್ನ ಅಭಿಪ್ರಾಯ.

ಒಂದೆಡೆ ಬಹು ಸೂಕ್ಷ್ಮವಾದ , ಪರಿಣಾಮಕಾರಿಯಾದ, ಭಯೋತ್ಪಾದಕ ವ್ಯವಸ್ಥೆ ಹಾಗೂ ವ್ಯವಸ್ಥಿತ ಬಲಪ್ರಯೋಗ ನಡೆಯುತ್ತಿದೆ; ಮತ್ತೊಂದೆಡೆ, ಪ್ರತೀಕಾರ ಕೈಗೊಳ್ಳುವ ಅಥವಾ ಸ್ವರಕ್ಷಣೆಯ ಎಲ್ಲ ಅಧಿಕಾರವನ್ನೂ ಕಸಿದುಕೊಳ್ಳಲಾಗಿದೆ. ಜನರನ್ನು ನಿರ್ವೀರ್ಯರನ್ನಾಗಿ ಮಾಡಿ ಅವರನ್ನು ಸೋಗಿನ ವ್ಯಕ್ತಿಗಳನ್ನಾಗಿ ಮಾಡಲಾಗಿದೆ. ಈ ಭೀಕರ ಅಭ್ಯಾಸ ಆಡಳಿತಗಾರರಲ್ಲಿ ಅಜ್ಞಾನವನ್ನೂ, ಆತ್ಮವಂಚನೆಯನ್ನೂ ಹೆಚ್ಚಿಸಿದೆ. ಇದೀಗ ನನ್ನ ಮೇಲೆ ಸಲೀಸಾಗಿ ಹಾಕಿರುವ, ನಾಗರಿಕರ ಸ್ವಾತಂತ್ರ್ಯವನ್ನು ಹತ್ತಿಕ್ಕುವ, 124 ಎ ಪರಿಚ್ಛೇದವನ್ನೇ ನೋಡಿ: ಇದು ಭಾರತೀಯ ದಂಡ ಸಂಹಿತೆಯ ರಾಜಕೀಯ ಸೆಕ್ಷನ್‌ಗಳ ರಾಜನಂತಿದೆ. ರಾಜಭಕ್ತಿಯನ್ನು ಕಾನೂನಿನಡಿಯಲ್ಲಿ ಉತ್ಪಾದಿಸಲಾಗಲೀ, ನಿಯಂತ್ರಿಸಲಾಗಲೀ ಆಗದು. ಯಾರಿಗಾದರೂ ಒಬ್ಬ ವ್ಯಕ್ತಿಯ ಬಗ್ಗೆಯಾಗಲೀ, ವ್ಯವಸ್ಥೆಯ ಬಗ್ಗೆಯಾಗಲೀ ಒಲವಿಲ್ಲ ಎಂದಿಟ್ಟುಕೊಳ್ಳಿ; ಅಂಥ ಮನುಷ್ಯ ಹಿಂಸಾಮಾರ್ಗ ಕುರಿತು ಯೋಚಿಸದಿದ್ದರೆ, ಹಿಂಸೆಗೆ ಕುಮ್ಮಕ್ಕು ಕೊಡದಿದ್ದರೆ ಅಥವಾ ಪ್ರಚೋದಿಸದಿದ್ದರೆ ಆತ ತನ್ನ ರಾಜಕೀಯ ಅತೃಪ್ತಿಯನ್ನು ಪೂರ್ಣವಾಗಿ ಹೊರ ಹಾಕಲು ಸ್ವತಂತ್ರನಾಗಿರಬೇಕು. ಆದರೆ ಶ್ರೀ ಬ್ಯಾಂಕರ್ ಹಾಗೂ ನನ್ನ ಮೇಲೆ ಹಾಕಿರುವ ಸೆಕ್ಷನ್ ಪ್ರಕಾರ ಬರೀ ಅಸಮಾಧಾನಕ್ಕೆ ಒತ್ತಾಸೆ ಕೊಟ್ಟರೂ ಅಪರಾಧವಾಗುತ್ತದೆ. ಈ ಸೆಕ್ಷನ್ನಿನಡಿ ದಾಖಲಾಗಿರುವ ಹಲವು ಪ್ರಕರಣಗಳನ್ನು ನಾನು ಅಧ್ಯಯನ ಮಾಡಿದ್ದೇನೆ. ಭಾರತದ ಜನ ಅಪಾರವಾಗಿ ಪ್ರೀತಿಸುವ ದೇಶಭಕ್ತರಿಗೆ ಈ ಸೆಕ್ಷನ್ನಿನ ಅಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಆದ್ದರಿಂದ ಈ ಸೆಕ್ಷನ್ನಿನಡಿ ನನ್ನನ್ನೂ ಅಪರಾಧಿಯನ್ನಾಗಿಸಿರುವುದು ನನ್ನ ಭಾಗ್ಯವೆಂದೇ ಪರಿಗಣಿಸುತ್ತೇನೆ.

ಆಡಳಿತ ನಡೆಸುತ್ತಿರುವ ಯಾವೊಬ್ಬ ಅಧಿಕಾರಿಯ ಬಗೆಗೂ ನನಗೆ ದ್ವೇಷವಿಲ್ಲ; ರಾಜಪ್ರತಿನಿಧಿಯ ಬಗೆಗೂ ನನಗೆ ದ್ವೇಷವಿಲ್ಲ. ಆದರೆ ಇಂಡಿಯಾಕ್ಕೆ ಹಿಂದಿನ ಬೇರಾವುದೇ ಆಡಳಿತ ವ್ಯವಸ್ಥೆಗಿಂತ ಹೆಚ್ಚಿನ ಕೆಡುಕನ್ನುಂಟು ಮಾಡಿರುವ ಸರ್ಕಾರದ ವಿರುದ್ಧ ಅತೃಪ್ತಿ ಹೊಂದಿರುವುದು ಒಂದು ಸದ್ಗುಣವೆಂದೇ ನಾನು ಭಾವಿಸಿದ್ದೇನೆ. ಬ್ರಿಟಿಷ್ ಆಡಳಿತದಲ್ಲಿ ಭಾರತವು ಹಿಂದೆಂದಿಗಿಂತಲೂ ಪೌರುಷಹೀನವಾಗಿದೆ. ಈ ಎಲ್ಲದರ ಅರಿವನ್ನುಳ್ಳ ನಾನು ಈ ಆಡಳಿತ ವ್ಯವಸ್ಥೆಯ ಬಗ್ಗೆ ಪ್ರೀತಿ ಇರಿಸಿಕೊಳ್ಳುವುದು ಪಾಪವೆಂದೇ ನಂಬುತ್ತೇನೆ. ಈ ಸರ್ಕಾರದ ಬಗೆಗೆ ರಾಜದ್ವೇಷ ವ್ಯಕ್ತಪಡಿಸಲಾಗಿವೆ ಎಂಬುದಕ್ಕೆ ಸಾಕ್ಷಿಯಾಗಿ ಕೋರ್ಟಿನಲ್ಲಿ ಮಂಡಿಸಿರುವ ಈ ಬರಹಗಳನ್ನು ಬರೆಯಲು ನಾನು ಶಕ್ತನಾಗಿದ್ದೆ ಎಂಬುದು ನನ್ನ ಅಮೂಲ್ಯ ಸುಯೋಗವಾಗಿದೆ. ಒಳಿತಿಗೆ ಸಹಕಾರ ಕೊಡುವುದು ನನ್ನ ಕರ್ತವ್ಯವಾಗಿರುವಂತೆಯೇ, ಕೇಡಿಗೆ ಅಸಹಕಾರ ನೀಡುವುದು ಕೂಡ ನನ್ನ ಕರ್ತವ್ಯವೇ ಹೌದು. ಇದು ನನ್ನ ವಿನಮ್ರ ನಂಬಿಕೆ.

ಹಿಂದೆ ಕೆಲವೊಮ್ಮೆ ಅಸಹಕಾರ ಚಳುವಳಿಯು ಕೆಟ್ಟವರ ವಿರುದ್ಧ ಉದ್ದೇಶಪೂರ್ವಕವಾಗಿ ಹಿಂಸೆ ಎಸಗಿದ ಸಂದರ್ಭಗಳಿವೆ. ಆದರೆ, ಕೇಡು ಹಿಂಸೆಯ ಮೂಲಕ ಮಾತ್ರ ಬದುಕಿ ಉಳಿಯುತ್ತದೆ; ಹೀಗಾಗಿ ಹಿಂಸೆಯ ಹಾದಿ ಹಿಡಿದ ಅಸಹಕಾರ ಚಳುವಳಿಯು ಕೇಡನ್ನು ಇನ್ನಷ್ಟು ಹೆಚ್ಚಿಸುತ್ತದೆ; ಕೇಡನ್ನು ಬೆಂಬಲಿಸದಿರುವುದು ಅಥವಾ ಅಸಹಕಾರ ಸೂಚಿಸುವುದು ಎಂದರೆ, ಹಿಂಸೆಯಿಂದ ಸಂಪೂರ್ಣ ಮುಕ್ತವಾಗಬೇಕು. ಈ ಅಂಶಗಳನ್ನು ನನ್ನ ದೇಶಬಾಂಧವರಿಗೆ ಮನವರಿಕೆ ಮಾಡಿಕೊಡಲು ನಾನು ಸದಾ ಪ್ರಯತ್ನ ಮಾಡುತ್ತಾ ಬಂದಿದ್ದೇನೆ.

ಅಹಿಂಸೆ ಎಂಬ ಪದಕ್ಕೆ 'ದುಷ್ಟ ಶಕ್ತಿಗಳಿಗೆ ಅಸಹಕಾರ ತೋರಿದ ಕಾರಣಕ್ಕಾಗಿ ವಿಧಿಸಲಾದ ಶಿಕ್ಷೆಗೆ ಸ್ವಇಚ್ಛೆಯಿಂದ ಒಡ್ಡಿಕೊಳ್ಳುವುದು ಎಂಬ ಅರ್ಥವೂ ಇದೆ. ಆದ್ದರಿಂದ, ಯಾವುದು ಕಾನೂನಿನ ಕಣ್ಣಿಗೆ ಉದ್ದೇಶಪೂರ್ವಕವಾದ ಅಪರಾಧ ಎಂದು ಕಾಣುತ್ತದೆಯೋ, ಹಾಗೂ ಯಾವುದು ನನ್ನ ದೃಷ್ಟಿಯಲ್ಲಿ ನಾಗರಿಕನೊಬ್ಬನ ಅತ್ಯಂತ ಮಹತ್ವದ ಕರ್ತವ್ಯವಾಗಿದೆಯೋ, ಅಂಥ ಕೆಲಸ ಮಾಡಿದ್ದಕ್ಕಾಗಿ ಅತ್ಯಂತ ಉಗ್ರ ಶಿಕ್ಷೆಯನ್ನು ನನಗೆ ನೀಡಬೇಕೆಂದು ಕೋರಲು ಹಾಗೂ ಅದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೇನೆಂದು ಹೇಳಲು ನಾನಿಲ್ಲಿ ನಿಂತಿದ್ದೇನೆ.

ನ್ಯಾಯಾಧೀಶರೇ, ಈಗ ನಿಮ್ಮೆದುರಿಗೆ ಇರುವ ಆಯ್ಕೆಗಳು ಎರಡೇ: ಒಂದು ; ನೀವು ಪ್ರತಿನಿಧಿಸುತ್ತಿರುವ ಕಾನೂನು ಒಂದು ದುಷ್ಟ ಕಾನೂನು, ಹಾಗೂ ನಾನು ನಿಜಕ್ಕೂ ಮುಗ್ಧ ಎಂದು ನಿಮಗೆ ಅನ್ನಿಸಿದರೆ, ಈ ದುಷ್ಟ ವ್ಯವಸ್ಥೆಯ ಜೊತೆಗಿನ ಸಂಬಂಧ ಕಡಿದುಕೊಂಡು ನಿಮ್ಮ ಸ್ಥಾನಕ್ಕೆ ರಾಜಿನಾಮೆ ನೀಡುವುದು. ಎರಡು ; ನೀವು ಪ್ರತಿನಿಧಿಸುತ್ತಿರುವ ಕಾನೂನು ಜನರ ಒಳಿತಿಗಾಗಿಯೇ ಇದೆ, ಹಾಗೂ ನನ್ನ ಚಟುವಟಿಕೆಗಳು ಜನಕಲ್ಯಾಣಕ್ಕೆ ಅಪಾಯಕಾರಿಯಾಗಿವೆ ಎಂದು ನಿಮಗೆ ಅನ್ನಿಸಿದರೆ ನನಗೆ ಅತ್ಯಂತ ಉಗ್ರ ಶಿಕ್ಷೆ ವಿಧಿಸುವುದು.

(18 ಮಾರ್ಚ್ 1922, 'ದ ಲಾ ಅಂಡ್ ದ ಲಾರ್ಸ್' ಪುಸ್ತಕದಿಂದ)

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ
RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58